# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

## (ವಿದ್ಯುತ್ ಸರಬರಾಜು ಕಂಪನಿಗಳಿಗೆ ಲೈಸೆನ್ಸಿನ ಷರತ್ತುಗಳು) ವಿನಿಯಮಗಳು, 2004

ಅಧಿಸೂಚನೆ ಸಂಖ್ಯೆ ಡಿ/01/03 ದಿನಾಂಕ 23.4.2004

### ಪೀಠಿಕೆ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು, ತನ್ನ 28.1.2003ರ ಆದೇಶದಲ್ಲಿ ವಿದ್ಯುಚ್ಛಕ್ತಿ ಸರಬರಾಜಿಗಾಗಿ ಕರ್ನಾಟಕದಲ್ಲಿ ನಾಲ್ಕು ವಿತರಣಾ ಲೈಸೆನ್ಸುದಾರರಿಗೆ ಅಂದರೆ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ), ಮಂಗಳೂರು ವಿದ್ಯುತ್ ಸರಬರಾಜು ಕಂಪನಿ (ಮೆಸ್ಕಾಂ), ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ (ಹೆಸ್ಕಾಂ) ಮತ್ತು ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ (ಗೆಸ್ಕಾಂ) (ಸಂಕ್ಷಿಪ್ತವಾಗಿ ಎಸ್ಕಾಂಗಳು) ಗಳಿಗೆ ಸಂಬಂಧಿತ ಲೈಸೆನ್ಸುಗಳಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶದೊಳಗೆ ಐದು ವರ್ಷಗಳಿಗಾಗಿ ವಿದ್ಯುಚ್ಛಕ್ತಿ ವ್ಯವಹಾರ ನಡೆಸಲು ಲೈಸೆನ್ಸುಗಳನ್ನು ಮಂಜೂರು ಮಾಡಿದೆ. ಈ ಲೈಸೆನ್ಸುಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ರಂತೆ ಮಂಜೂರು ಮಾಡಿದೆ. ಭಾರತ ಸರ್ಕಾರವು, ಜೂನ್ 10, 2003 ರಿಂದ ಜಾರಿಗೆ ಬರುವಂತೆ ವಿದ್ಯುಚ್ಛಕ್ತಿ ಅಧಿನಿಯಮ, 2003 ಅನ್ನು ಅಧಿಸೂಚಿಸಿದೆ. ವಿದ್ಯುಚ್ಛಕ್ತಿ ಅಧಿನಿಯಮ, 2003ರ ಪ್ರಕರಣ 14ರ ಮೊದಲ ಉಪಬಂಧದನುಸಾರ ಅದು ಜಾರಿಗೆ ಬಂದ ಅಥವಾ ಅದಕ್ಕಿಂತ ಹಿಂದೆ ಪ್ರಸರಣ ಅಥವಾ ವಿತರಣೆಗಾಗಿ ನೇಮಕಗೊಂಡ ದಿನಾಂಕದಿಂದ ತೊಡಗಿದ ಯಾವುದೇ ವ್ಯಕ್ತಿ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999 ಹಾಗೂ ಅದರಡಿಯ ಉಪಬಂಧಗಳಂತೆ ವಿದ್ಯುಚ್ಛಕ್ತಿ ಅಧಿನಿಯಮ 2003 ರಂತೆ ಲೈಸೆನ್ಸುದಾರರೆಂದು ಭಾವಿಸತಕ್ಕದ್ದು. ವಿದ್ಯುಚ್ಛಕ್ತಿ ಅಧಿನಿಯಮ 2003 ರ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಗಳನುಸಾರ (ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ 1999 ಕೂಡ ಸೇರಿದೆ) ಸರಬರಾಜು ಕಂಪನಿಗಳೂ ಕೂಡ ಲೈಸೆನ್ಸುದಾರರೆಂದು ಭಾವಿಸತಕ್ಕದೆಂದು 14ನೆಯ ಪ್ರಕರಣದ ಐದನೆಯ ಉಪಬಂಧವು ಒದಗಿಸುತ್ತದೆ. ವಿದ್ಯುಚ್ಛಕ್ತಿ ಅಧಿನಿಯಮ, 2003 ರ 16ನೆಯ ಪ್ರಕರಣವು, 14ನೆಯ ಪ್ರಕರಣದ ಒಂದರಿಂದ ಐದನೆಯ ಉಪಬಂಧದೊಳಗೆ ಬರುವ ಲೈಸೆನ್ಸುದಾರರಿಗೆ ಅನ್ವಯವಾಗುವ ಯಾವುದೇ ಸಾಮಾನ್ಯ ಅಥವಾ ನಿರ್ದಿಷ್ಟ ಷರತ್ತುಗಳನ್ನು ಲೈಸೆನ್ಸುದಾರರಾಗಿ ನೇಮಕಗೊಂಡ ಒಂದು ವರ್ಷದೊಳಗಾಗಿ ನಿರ್ದಿಷ್ಟಪಡಿಸಲು ಸೂಕ್ತ ಆಯೋಗವನ್ನು ಸಮರ್ಥಗೊಳಿಸಿದೆ. ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ರ ಸೂಕ್ತ ಉಪಬಂಧಗಳೊಂದಿಗೆ ವಿದ್ಯುಚ್ಛಕ್ತಿ ಅಧಿನಿಯಮ, 2003 ರ 16ನೆಯ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮುಂದಿನ ವಿನಿಯಮಗಳನ್ನು ರಚಿಸಿದೆ :

1. ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ವಿಸ್ತಾರ.

(i) ಈ ವಿನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿ. ಸ. ಕಂಪನಿಗಳಿಗಾಗಿ ಲೈಸೆನ್ಸಿನ ಷರತ್ತುಗಳು) ವಿನಿಯಮಗಳು, 2004 ಎಂದು ಕರೆಯಬಹುದಾಗಿದೆ.

(ii) ಇವು 10.6.2004 ರಿಂದ ಜಾರಿಗೆ ಬರತಕ್ಕದ್ದು.

(iii) ಇವು, ಬೆಸ್ಕಾಂ, ಮೆಸ್ಕಾಂ, ಹೆಸ್ಕಾಂ ಮತ್ತು ಗೆಸ್ಕಾಂ ಗಳಿಗೆ ಅನ್ವಯಿಸತಕ್ಕದ್ದು.

2. ವ್ಯಾಖ್ಯಾನಗಳು :

ಈ ವಿನಿಯಮಗಳಲ್ಲಿ ಬಳಸಿರುವ ಪದಗಳು, ಶಬ್ದಗಳು ಮತ್ತು ಪದಾವಳಿಗಳಿಗೆ ಕ.ವಿ.ಸು. ಅಧಿನಿಯಮ, 1999 ರೊಂದಿಗೆ ಓದಲಾದ ವಿದ್ಯುಚ್ಛಕ್ತಿ ಅಧಿನಿಯಮ 2003 ರಲ್ಲಿ ಗೊತ್ತುಪಡಿಸಿದ ಅರ್ಥಗಳನ್ನು ಹೊಂದಿರತಕ್ಕದ್ದು ಮತ್ತು ವಿರೋಧ ಉಂಟಾದ ಪ್ರಕರಣದಲ್ಲಿ, ವಿದ್ಯುಚ್ಛಕ್ತಿ ಅಧಿನಿಯಮ, 2003ರಲ್ಲಿ ನೀಡಿರುವ ಅರ್ಥವೇ ಇರತಕ್ಕದ್ದು.

3. ಲೈಸೆನ್ಸಿನ ಷರತ್ತುಗಳು.

(i) ಈ ವಿನಿಯಮಗಳಲ್ಲಿರುವ ನಮೂನೆ ಒಂದರಲ್ಲಿ ವಿ. ಸ. ಕಂಪನಿಗಳಿಗೆ ಅನ್ವಯವಾಗುವ ಸಾಮಾನ್ಯ ಮತ್ತು ವಿಶೇಷ ಷರತ್ತುಗಳು ಅಧಿಸೂಚಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಬಿ) ನಮೂನೆ 1ರಲ್ಲಿನ ಲೈಸೆನ್ಸಿನ ಷರತ್ತುಗಳು, ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಲೈಸೆನ್ಸು ನೀಡಿಕೆ) ವಿನಿಯಮಗಳು, 2000 ರಲ್ಲಿ ಸೇರಿಸಲಾಗಿದೆ ಎಂದು ಪರಿಭಾವಿಸತಕ್ಕದ್ದು.

4. ಲೈಸೆನ್ಸಿಗೆ ತಿದ್ದುಪಡಿ

ಎ) ಆಯೋಗವು, ಅನ್ಯಥಾ ಅಥವಾ ಲೈಸೆನ್ಸುದಾರರ ಅರ್ಜಿಯ ಮೇಲೆ ಮತ್ತು ಸಾರ್ವಜನಿಕ ಹಿತಾಸಕ್ತಿ ಅಭಿಪ್ರಾಯದಲ್ಲಿ ಹಾಗೆ ಅನುಮತಿಸಿದಲ್ಲಿ, ಅದು ಅರ್ಹವೆಂದು ಭಾವಿಸಿದಲ್ಲಿ ನಮೂನೆ – 1ರಲ್ಲಿನ ಷರತ್ತುಗಳಿಗೆ ಅಂತಹ ಬದಲಾವಣೆ ಮತ್ತು ತಿದ್ದುಪಡಿಗಳನ್ನು ಮಾಡಬಹುದಾಗಿದೆ.

ಪರಂತು, ಲೈಸೆನ್ಸುದಾರನ ಸಮ್ಮತಿಯಂತೆ ಅಂತಹ ಸಮ್ಮತಿಯು ಆಯೋಗದ ಅಭಿಪ್ರಾಯದಲ್ಲಿ ಅಕಾರಣವಾಗಿ ತಡೆಹಿಡಿಯಲಾಗಿದೆ ಎಂಬುದನ್ನು ಹೊರತು ಪಡಿಸಿ ಅಂತಹ ಬದಲಾವಣೆಗಳು ಅಥವಾ ತಿದ್ದುಪಡಿಗಳನ್ನು ಮಾಡತಕ್ಕದ್ದಲ್ಲ.

ಬಿ) ಲೈಸೆನ್ಸಿನ ಷರತ್ತುಗಳಿಗೆ ಯಾವುದೇ ಬದಲಾವಣೆ ಅಥವಾ ತಿದ್ದುಪಡಿಗಳನ್ನು ಮಾಡುವುದಕ್ಕಿಂತ ಮುಂಚಿತವಾಗಿ ಅಧಿನಿಯಮದ ಪ್ರಕರಣ 18(2) ಉಪಬಂಧಗಳನ್ನು ಜಾರಿಗೊಳಿಸತಕ್ಕದ್ದು.

5. ಅಡಚಣೆಗಳನ್ನು ತೊಡೆಯುವ ಅಧಿಕಾರ

ಈ ವಿನಿಯಮಗಳ ಯಾವುದೇ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ಅಡಚಣೆಗಳು ಉಂಟಾದಲ್ಲಿ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ಆಯೋಗವು ಅಡಚಣೆಗಳನ್ನು ನಿವಾರಿಸುವ ಉದ್ದೇಶಕ್ಕಾಗಿ ಅಗತ್ಯ ಅಥವಾ ಯುಕ್ತವೆಂದು ತೋರುವ ಸೂಕ್ತ ಕ್ರಮಗಳನ್ನು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ತೆಗೆದುಕೊಳ್ಳಬಹುದಾಗಿದೆ.

6. ರದ್ದುಗೊಳಿಸುವುದು :

ಆಯೋಗದ 28.1.2003ರ ಆದೇಶಕ್ಕೆ ಸಂಬಂಧಿಸಿದಂತೆ ಬಿಡುಗಡೆಗೊಳಿಸಿದ ಲೈಸೆನ್ಸಿನ ಷರತ್ತುಗಳು ಈ ವಿನಿಯಮಗಳು ಜಾರಿಗೆ ಬಂದ ದಿನಾಂಕದಿಂದ ರದ್ದಾಗಿವೆ.

ಆಯೋಗದ ಆದೇಶದ ಮೇರೆಗೆ

ಕಾರ್ಯದರ್ಶಿ

# ನಮೂನೆ – 1

## ಲೈಸೆನ್ಸಿನ ಷರತ್ತುಗಳು

### ಭಾಗ – I

1. ಪರಿಭಾಷೆಗಳು

1.1. ಈ ಲೈಸೆನ್ಸಿನ ಷರತ್ತುಗಳಲ್ಲಿ ಬಳಸಿರುವ ಪದಗಳು, ಶಬ್ದಗಳು ಮತ್ತು ಪದಾವಳಿಗಳ ಬಗ್ಗೆ ಪರಿಭಾಷಿಸದಿದ್ದರೂ, ಕ.ವಿ.ಸು. ಅಧಿನಿಯಮ, 1999ರೊಂದಿಗೆ ಓದಲಾದ ವಿದ್ಯುಚ್ಛಕ್ತಿ ಅಧಿನಿಯಮ, 2003ರಲ್ಲಿ ಗೊತ್ತು ಪಡಿಸಿರುವ ಅದೇ ಅರ್ಥಗಳನ್ನು ಹೊಂದಿರತಕ್ಕದ್ದು ಮತ್ತು ಅದರಲ್ಲಿ ವಿರೋಧ ಉಂಟಾದ ಪ್ರಕರಣದಲ್ಲಿ ವಿದ್ಯುಚ್ಛಕ್ತಿ ಅಧಿನಿಯಮ 2003ರಲ್ಲಿ ಗೊತ್ತುಪಡಿಸಿರುವ ಅರ್ಥಗಳೇ ಇರತಕ್ಕದ್ದು.

1.2. ಈ ಲೈಸೆನ್ಸಿನ ಷರತ್ತುಗಳು ಸಂದರ್ಭಕ್ಕೆ ಅನ್ಯಥಾ ಅಗತ್ಯವಿರದ ಹೊರತು;

ಎ) "ಲೆಕ್ಕ ವಿವರಣ ಪಟ್ಟಿ" ಎಂದರೆ ಪ್ರತಿ ಆರ್ಥಿಕ ವರ್ಷದಲ್ಲಿ ಲಾಭ ಮತ್ತು ನಷ್ಟದ ಲೆಕ್ಕವನ್ನು, ಜಮಾ ಖರ್ಚು ಪಟ್ಟಿ ಮತ್ತು ಸಂಪನ್ಮೂಲಗಳ ವಿವರಣ ಪಟ್ಟಿ ಮತ್ತು ನಿಧಿಗಳ ವಿನಿಯೋಗಕ್ಕೆ ಸಂಬಂಧಪಟ್ಟ ಟಿಪ್ಪಣಿಗಳ ಸಹಿತ ಪ್ರತಿಯೊಂದು ಪ್ರತ್ಯೇಕ ವ್ಯವಹಾರಕ್ಕೆ ಸಂಬಂಧಪಟ್ಟ ಲೆಕ್ಕ ವಿವರಣೆ ಪಟ್ಟಿ ಮತ್ತು ಕಾಲಕಾಲಕ್ಕೆ ಆಯೋಗವು ಗೊತ್ತುಪಡಿಸುವ ಇತರ ಸಮರ್ಥನೀಯ ವಿವರಣೆ ಪಟ್ಟಿಗಳು ಮತ್ತು ಮಾಹಿತಿಗಳನ್ನು ಹಾಗೂ ಯಾವುದೇ ಆದಾಯದ, ವೆಚ್ಚದ, ಆಸ್ತಿ ಪ್ರಾಪ್ತಿಯ, ಹೊಣೆಗಾರಿಕೆಯ, ಮೀಸಲಿನ ಅಥವಾ ಏರ್ಪಾಟಿನ ಮೊತ್ತಗಳನ್ನು, ಎಂದರೆ :

i) ಯಾವುದೇ ಇತರ ವ್ಯವಹಾರದಿಂದ ವಿಧಿಸಲಾದ ಅಥವಾ ಯಾವುದೇ ಇತರ ವ್ಯವಹಾರಕ್ಕೆ ವಿಧಿಸಿದ, ಹಾಗೆ ವಿಧಿಸಿರುವುದಕ್ಕೆ ಆಧಾರದ ವಿವರಣೆ ಸಹಿತ, ಅಥವಾ

ii) ಯಾವುದೇ ವಿತರಣ ವ್ಯವಹಾರ ಮತ್ತು ಲೈಸೆನ್ಸುದಾರನ ಅಥವಾ ಅದರ ಅಂಗ ಸಂಸ್ಥೆಯ ಇತರೆ ಯಾವುದೇ ವ್ಯವಹಾರದ ನಡುವ ಪಾಲು ಮಾಡುವಿಕೆಯಿಂದ ಅಥವಾ ಹಂಚಿಕೆಯಿಂದ ನಿರ್ಧರಿಸಿದ ಪಾಲು ಮಾಡುವಿಕೆ ಅಥವಾ ಹಂಚಿಕೆಗೆ ಆಧಾರ ವಿವರಣೆ ಸಹಿತ – ಮೊತ್ತಗಳನ್ನು ತೋರಿಸುವ ವಿವರಣೆ ಪಟ್ಟಿ.

ಬಿ) "ಅಧಿನಿಯಮ" ಎಂದರೆ ವಿದ್ಯುಚ್ಛಕ್ತಿ ಅಧಿನಿಯಮ, 2003 (2003ರ 36ನೆಯ ಅಧಿನಿಯಮ)

ಸಿ) "ವಾರ್ಷಿಕ ಲೆಕ್ಕಗಳು" ಎಂದರೆ ಕಂಪನಿಗಳ ಅಧಿನಿಯಮ, 1956ರ ಉಪಬಂಧಗಳನುಸಾರ ಸಿದ್ಧಪಡಿಸಿದ ಮತ್ತು/ಅಥವಾ ಅಧಿನಿಯಮದ ಉಪಬಂಧಗಳಂತೆ ಆಯೋಗವು ನಿರ್ದೇಶಿಸಬಹುದಾದಂತೆ ಸಿದ್ಧಪಡಿಸಿದ ಲೈಸೆನ್ಸುದಾರನ ಲೆಕ್ಕಪತ್ರಗಳು.

ಡಿ) 'ಸರಬರಾಜು ಪ್ರದೇಶ' ಎಂದರೆ, ಲೈಸೆನ್ಸು ಮೂಲಕ ಭೌಗೋಳಿಕ ಪ್ರದೇಶದೊಳಗೆ ಯಾವುದೇ ಚಟುವಟಿಕೆ ನಡೆಸಲು ಪ್ರಾಧಿಕೃತಗೊಳಿಸಲು ಅವಕಾಶ ನೀಡಿರುವುದು.

ಇ) "ಲೆಕ್ಕಪರಿಶೋಧಕರು" ಎಂದರೆ ಕಂಪನಿಗಳ ಅಧಿನಿಯಮ, 1956ರ (1956ರ 1ನೆಯ ಅಧಿನಿಯಮ) ಅಗತ್ಯಪಡಿಸಿದಂತೆ ಕಛೇರಿ ಹೊಂದಿರುವ ಲೈಸೆನ್ಸುದಾರನ ಲೆಕ್ಕ ಪರಿಶೋಧಕರು.

ಎಫ್) ಯಾವುದೇ ವ್ಯಕ್ತಿಗೆ, ವ್ಯವಹಾರಕ್ಕೆ ಅಥವಾ ಚಟುವಟಿಕೆಗೆ ಸಂಬಂಧಿಸಿದಂತೆ "ಅಧಿಕೃತಗೊಳಿಸುವುದು" ಎಂದರೆ, ಅಧಿನಿಯಮದ 14ನೆಯ ಪ್ರಕರಣದಂತೆ ಲೈಸೆನ್ಸಿನ ಮೂಲಕ ಅಧಿಕೃತಗೊಂಡುದು.

ಜಿ) "ಆಯೋಗ" ಎಂದರೆ ವಿದ್ಯುಚ್ಛಕ್ತಿ ಅಧಿನಿಯಮ, 2003ರ 82ನೆಯ ಪ್ರಕರಣದಂತೆ ಕರ್ನಾಟಕ ರಾಜ್ಯಕ್ಕಾಗಿ ರಚನೆಯಾದ ರಾಜ್ಯದ ಆಯೋಗ.

ಹೆಚ್) "ಗ್ರಾಹಕ" ಎಂದರೆ ಸಂದರ್ಭನುಸಾರ ಲೈಸೆನ್ಸುದಾರ, ಸರ್ಕಾರ ಅಥವಾ ಅಂತಹ ಇತರ ವ್ಯಕ್ತಿಯ ಕಾಮಗಾರಿಗಳೊಂದಿಗೆ ವಿದ್ಯುಚ್ಛಕ್ತಿಯನ್ನು ಸ್ವೀಕರಿಸುವ ಉದ್ದೇಶಕ್ಕಾಗಿ ಯಾವುದೇ ವ್ಯಕ್ತಿಯ ಪ್ರದೇಶಕ್ಕೆ ತತ್ಕಾಲದಲ್ಲಿ ಸಂಪರ್ಕಗೊಂಡಿರುವುದೂ ಸೇರಿದಂತೆ ಹಾಗೂ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ನಿಯಮಗಳ ಅಡಿಯಲ್ಲಿ ಸಾರ್ವಜನಿಕರಿಗೆ ವಿದ್ಯುಚ್ಛಕ್ತಿ ಸರಬರಾಜಿನ ವ್ಯವಹಾರದಲ್ಲಿ ತೊಡಗಿರುವ ಲೈಸೆನ್ಸುದಾರ ಅಥವಾ ಸರ್ಕಾರ ಅಥವಾ ಯಾವುದೇ ಇತರ ವ್ಯಕ್ತಿಯಿಂದ ತನ್ನ ಸ್ವಂತ ಬಳಕೆಗಾಗಿ ವಿದ್ಯುಚ್ಛಕ್ತಿ ಸರಬರಾಜು ಪಡೆದ ಯಾವುದೇ ವ್ಯಕ್ತಿ.

ಐ) "ವಿಲೇ ಮಾಡುವುದು" ಅಥವಾ "ವಿಲೇ" ಎಂದರೆ ಮಾರಾಟ, ಕೊಡುಗೆ, ಗುತ್ತಿಗೆ, ಲೈಸೆನ್ಸು, ಸಾಲ, ಭದ್ರತೆ, ಅಡಮಾನ, ಹೊಣೆ ಅಥವಾ ಬೇರೆ ರೀತಿಯ ಋಣಭಾರಗಳ ನೀಡಿಕೆ ಅಥವಾ ಯಾವುದೇ ಋಣಭಾರ ಇರಲು ಅನುಮತಿಸುವುದು ಅಥವಾ ಮೂರನೆಯ ಪಕ್ಷಕಾರನಿಗೆ ಇತರೆ ಯಾವುದೇ ವಿಲೇವಾರಿ.

ಜೆ) 'ವಿತರಣೆ' ಎಂದರೆ ವಿತರಣಾ ಪದ್ಧತಿ ಮತ್ತು ಅದರ ಎಲ್ಲಾ ಸಹ ಕಾಮಗಾರಿಗಳಿಂದ ವಿದ್ಯುಚ್ಛಕ್ತಿ ಸಾಗಣೆ.

ಕೆ) "ವಿವರಣೆಯ ವ್ಯವಹಾರ" ಎಂದರೆ ಲೈಸೆನ್ಸುದಾರನ ಸ್ವಾಮ್ಯದಲ್ಲಿರುವ ಮತ್ತು/ಅಥವಾ ಅವನು ನಿರ್ವಹಿಸುತ್ತಿರುವ ಯಾವುದೇ ಒಂದು ಪದ್ಧತಿ ಮೂಲಕ ತನ್ನ ಲೆಕ್ಕದಲ್ಲಾಗಲೀ ಅಥವಾ ಮೂರನೆಯ ಪಕ್ಷಕಾರನ ಲೆಕ್ಕದಲ್ಲಾಗಲಿ ವಿತರಣೆಯಲ್ಲಿ ಅಥವಾ ಅದಕ್ಕೆ ಪೂರಕವಾಗಿ ಲೈಸೆನ್ಸುದಾರನ ಅಧಿಕೃತ ವ್ಯವಹಾರ ಎಂದು ಅರ್ಥ.

ಎಲ್) "ವಿತರಣಾ ಸಂಹಿತೆ" ಎಂದರೆ, ಆಯೋಗ ಅನುಮೋದಿಸಿದ ಹಾಗೂ ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದಂತೆ ವಿತರಣಾ ಪದ್ಧತಿಯ ಸಂಪರ್ಕ, ಕಾರ್ಯಾಚರಣೆ ಮತ್ತು ಅದರ ಬಳಕೆಗೆ ಸಂಬಂಧಿಸಿದಂತೆ ಎಲ್ಲಾ ಭೌತಿಕ ತಾಂತ್ರಿಕ ದೃಷ್ಟಿಯಲ್ಲಿ ನಿಯಂತ್ರಿಸುವ ಸಂಹಿತೆ.

ಎಂ) 'ವಿತರಣಾ ಲೈಸೆನ್ಸುದಾರ' ಎಂದರೆ, ತನ್ನ ಸರಬರಾಜು ಪ್ರದೇಶದಲ್ಲಿ ಗ್ರಾಹಕರಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವುದಕ್ಕಾಗಿ ವಿತರಣಾ ಪದ್ಧತಿಯ ಕಾರ್ಯಾಚಾಲನೆ ಮತ್ತು ನಿರ್ವಹಣೆಗೆ ಅಧಿಕೃತಗೊಂಡಿರುವ ಲೈಸೆನ್ಸುದಾರ.

ಎನ್) 'ವಿತರಣಾ ಪದ್ಧತಿ' ಎಂದರೆ ಪ್ರಸರಣಾ ಮಾರ್ಗಗಳ ವಿತರಣಾ ಬಿಂದು ಅಥವಾ ಉತ್ಪಾದನಾ ಕೇಂದ್ರಕ್ಕೆ ಸಂಪರ್ಕ ಮತ್ತು ಗ್ರಾಹಕರ ಸ್ಥಾಪನದ ಸಂಪರ್ಕ ಬಿಂದುಗಳ ನಡುವಿನ ವಿದ್ಯುತ್ ಮಾರ್ಗ ಮತ್ತು ಸಂಬಂಧಿಸಿದ ಸೌಲಭ್ಯಗಳ ಪದ್ಧತಿ.

ಒ) 'ವಿತರಣಾ ಪದ್ಧತಿಯ ಕಾರ್ಯಾಚರಣಾ ಗುಣಮಟ್ಟಗಳು' ಎಂದರೆ ಷರತ್ತು 24.2ಕ್ಕೆ ಸಂಬಂಧಿಸಿದಂತೆ ಆಯೋಗದಿಂದ ಅನುಮೋದಿತವಾದ ವಿತರಣಾ ಪದ್ಧತಿಯ ಲೈಸೆನ್ಸುದಾರನ ಕಾರ್ಯಾಚರಣೆಗೆ ಸಂಬಂಧಿಸಿದ ಗುಣಮಟ್ಟಗಳು.

ಪಿ) 'ವಿತರಣಾ ಪದ್ಧತಿಯ ಯೋಜನೆ ಮತ್ತು ಭದ್ರತಾ ಗುಣಮಟ್ಟಗಳು' ಎಂದರೆ ಷರತ್ತು 24.2ರ ಅನುಸರಣೆಯಂತೆ ಆಯೋಗದಿಂದ ಅನುಮೋದಿತವಾದ ಲೈಸೆನ್ಸುದಾರನ ಯೋಜನಾ ಪದ್ಧತಿಗಳ ಸಾಮರ್ಥ್ಯ ಮತ್ತು ತನ್ನ ವಿತರಣಾ ಪದ್ಧತಿಯ ಕಾರ್ಯಗತಿಗೆ ಸಂಬಂಧಿಸಿದ ಗುಣಮಟ್ಟಗಳು.

ಕ್ಯೂ) 'ಅನಿವಾರ್ಯ ಘಟನೆ' ಎಂದರೆ ವಿದ್ಯುತ್ ಸುರಕ್ಷತೆಗೆ ಸಂಬಂಧಿಸಿದ ಯಾವುದೇ ಸುಸಂಗತ ಕಾನೂನುಗಳ ಅಥವಾ ವಿನಿಯಮಗಳ ಉಲ್ಲಂಘನೆಯಲ್ಲಿ ಪರ್ಯವಸಾನಗೊಳ್ಳಲು ಅನುಮತಿ ಮಾಡಿಕೊಡುವ ಅಥವಾ ಯಾವುದೇ ಕೃತ್ಯಗಳು, ಭೂಕಂಪಗಳು, ಚಂಡಮಾರುತ, ಪ್ರವಾಹಗಳು, ಬಿರುಗಾಳಿ, ಪ್ರತಿಕೂಲ ಹವಾಮಾನ ಪರಿಸ್ಥಿತಿಗಳು ಅಥವಾ ಇತರ ಅದೇ ರೀತಿಯ ಘಟನಾವಳಿಗಳನ್ನೊಳಗೊಂಡಂತೆ ಲೈಸೆನ್ಸುದಾರನ ಯುಕ್ತ ನಿಯಂತ್ರಣಕ್ಕೆ ಮೀರಿದ ಘಟನೆಗಳು.

ಆರ್) "ವೇದಿಕೆ" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗ (ಗ್ರಾಹಕ ಕುಂದುಕೊರತೆ ನಿವಾರಣಾ ವೇದಿಕೆ ಮತ್ತು ಒಂಬುಡ್ಸ್‌ಮನ್) ವಿನಿಯಮಗಳು 2004 ರಡಿಯಲ್ಲಿ ವಿತರಣಾ ಲೈಸೆನ್ಸುದಾರನು ಸ್ಥಾಪಿಸಿದ ಕುಂದುಕೊರತೆಗಳ ದೂರುಗಳ ನಿವಾರಣೆಗಾಗಿ ವೇದಿಕೆ.

ಎಸ್) 'ಉತ್ಪಾದನಾ ಕಂಪನಿ' ಎಂದರೆ ಉತ್ಪಾದನಾ ಕೇಂದ್ರದ ಮಾಲೀಕ ಅಥವಾ ಕಾರ್ಯಚಾಲನೆಗೊಳಿಸಿರುವ ಅಥವಾ ನಿರ್ವಹಿಸುವ ಯಾವುದೇ ಕಂಪನಿ ಅಥವಾ ನಿಗಮಿತ ನಿಕಾಯ, ಸಂಘ ಅಥವಾ ವ್ಯಕ್ತಿಗಳ ಸಂಸ್ಥೆ, ಅದರಲ್ಲಿ ಸೇರಿರಬಹುದು ಅಥವಾ ಇಲ್ಲದಿರಬಹುದು ಅಥವಾ ಕೃತಕ ನ್ಯಾಯಿಕ ವ್ಯಕ್ತಿ.

ಟಿ) ಈ ವಿನಿಯಮಗಳ ಉದ್ದೇಶಕ್ಕಾಗಿ 'ಲೈಸೆನ್ಸುದಾರ' ಎಂದರೆ ಸಂದರ್ಭಾನುಸಾರ ಬೆಸ್ಕಾಂ, ಮೆಸ್ಕಾಂ, ಹೆಸ್ಕಾಂ ಮತ್ತು ಗೆಸ್ಕಾಂ ಎಂದು ಅರ್ಥ.

ಯು) 'ಪ್ರಮುಖ ಘಟನೆ' ಎಂದರೆ ಆಯೋಗದಿಂದ ಅನುಮೋದಿತವಾದ ಗ್ರಿಡ್ ಸಂಹಿತೆ, ವಿತರಣಾ ಸಂಹಿತೆ ಅಥವಾ ಕಾರ್ಯಾಧಾರಿತ ಗುಣಮಟ್ಟಗಳಲ್ಲಿ ನಿರ್ದಿಷ್ಟ ಪಡಿಸಿದಂತೆ "ಗಮನಾರ್ಹ ಅಡಚಣೆ", "ಸಾಕಷ್ಟು ಹಾನಿ", ಗಣನೀಯ ಹಾನಿಗಳ ತಾಂತ್ರಿಕ ಗುಣ ಸ್ವಭಾವದೊಂದಿಗೆ ಸೇವೆಯಲ್ಲಿ ಗಮನಾರ್ಹ ಅಡಚಣೆ, ಉಪಕರಣಗಳಿಗೆ ಸಾಕಷ್ಟು ಹಾನಿ, ಅಥವಾ ವ್ಯಕ್ತಿಗಳ ಜೀವಹಾನಿ ಅಥವಾ ಗಮನಾರ್ಹ ಗಾಯ ಉಂಟಾಗುವುದರಲ್ಲಿ ಪರ್ಯವಸಾನಗೊಳ್ಳುವ ಲೈಸೆನ್ಸುದಾರನ ಸರಬರಾಜು ಪ್ರದೇಶದಲ್ಲಿ ವಿದ್ಯುಚ್ಛಕ್ತಿ ವಿತರಣೆಯೊಂದಿಗೆ ಸಂಬಂಧಿಸಿದ ಘಟನೆ.

ವಿ) "ಒಂಬುಡ್ಸ್‌ಮನ್" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗ (ಗ್ರಾಹಕ ಕುಂದುಕೊರತೆ ನಿವಾರಣಾ ವೇದಿಕೆ ಮತ್ತು ಒಂಬುಡ್ಸ್‌ಮನ್) ವಿನಿಯಮಗಳು, 2004 ರಡಿಯಲ್ಲಿ ಆಯೋಗದಿಂದ ನೇಮಕವಾದ/ಪದನಿಮಿತ್ತಗೊಂಡ ಪ್ರಾಧಿಕಾರ.

ಡಬ್ಲ್ಯು) "ಕಾರ್ಯಾಚರಣಾ ನಿಯಂತ್ರಣ" ಎಂದರೆ ಕಾರ್ಯಾಚರಣೆ ಹಕ್ಕಿನ ನಿಯಂತ್ರಣ.

ಎಕ್ಸ್) 'ಇತರ ವ್ಯವಹಾರ' ಎಂದರೆ ವಿತರಣ ವ್ಯವಹಾರಕ್ಕಾಗಿ ಅಗತ್ಯವಿಲ್ಲದ, ಆದರೆ ಅದರ ಭಾಗ, ಸಂಬಂಧಿಸಿದ ಅಥವಾ ಸಹಾಯಕವಾಗಿ ಆಕಸ್ಮಿಕವಾಗಿರುವ ವ್ಯವಹಾರ.

ವೈ) 'ವಿನಿಯಮಗಳು' ಎಂದರೆ ಅಧಿನಿಯಮದಂತೆ ಆಯೋಗದಿಂದ ಬಿಡುಗಡೆಯಾದ ವಿನಿಯಮಗಳು.

ಜಡ್) ವಿದ್ಯುಚ್ಛಕ್ತಿ ಸಂಬಂಧದಲ್ಲಿ 'ಸರಬರಾಜು' ಎಂದರೆ ಲೈಸೆನ್ಸುದಾರ ಅಥವಾ ಗ್ರಾಹಕರಿಗೆ ವಿದ್ಯುಚ್ಛಕ್ತಿಯ ಮಾರಾಟ.

ಜಡ್‌ಎ) 'ಪ್ರತ್ಯೇಕ ವ್ಯವಹಾರ' ಎಂದರೆ ಒಂದರಿಂದ ಮತ್ತೊಂದನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳಲಾದ ಪ್ರತಿಯೊಂದು ವಿತರಣ ವ್ಯವಹಾರ ಮತ್ತು ಇತರ ವ್ಯವಹಾರ.

ಜಡ್‌ಬಿ) 'ಎಸ್‌ಎಲ್‌ಡಿಸಿ' ಎಂದರೆ ಅಧಿನಿಯಮದ 31(1) ಪ್ರಕರಣದಂತೆ ಸ್ಥಾಪಿಸಿರುವ ರಾಜ್ಯ ವಿದ್ಯುತ್ ರವಾನೆ ಕೇಂದ್ರ.

ಜಡ್‌ಸಿ) 'ಕಾರ್ಯಾಧಾರಿತ ಗುಣಮಟ್ಟಗಳು ಎಂದರೆ ಅಧಿನಿಯಮದ 57ನೆಯ ಪ್ರಕರಣದನುಸಾರ ವಿನಿಯಮಗಳ ಮೂಲಕ ಆಯೋಗವು ನಿರ್ದಿಷ್ಟಪಡಿಸಬಹುದಾದ ಅಂತಹ ಕಾರ್ಯಾಧಾರಿತ ಗುಣಮಟ್ಟಗಳು.

ಜಡ್‌ಡಿ) 'ರಾಜ್ಯ ಗ್ರಿಡ್ ಸಂಹಿತೆ (ಕೋಡ್ ಆಫ್ ಟೆಕ್ನಿಕಲ್ ಇಂಟರ್‌ಫೇಸ್)' ಎಂದರೆ ಅಧಿನಿಯಮದ 86(1) (ಹೆಚ್) ಪ್ರಕರಣದಂತೆ ಆಯೋಗವು ನಿರ್ದಿಷ್ಟಪಡಿಸಿದ ರಾಜ್ಯ ಗ್ರಿಡ್ ಸಂಹಿತೆ.

ಜಡ್‌ಎಫ್) "ಎಸ್‌ಟಿಯು" ಎಂದರೆ ಅಧಿನಿಯಮದ 39(1)ನೆಯ ಪ್ರಕರಣದಂತೆ ಕರ್ನಾಟಕ ಸರ್ಕಾರದಿಂದ ಅಧಿಸೂಚಿತವಾದ ರಾಜ್ಯ ಪ್ರಸರಣ ಸಂಸ್ಥೆ.

ಜಡ್‌ಜಿ) "ಸಹಾಯಕ" ಎಂದರೆ ಕಂಪನಿಗಳ ಅಧಿನಿಯಮ, 1956ರ 4ನೆಯ ಪ್ರಕರಣದಲ್ಲಿಯ ಅರ್ಥವನ್ನೇ ಹೊಂದಿರತಕ್ಕದ್ದು.

ಜಡ್‌ಹೆಚ್) "ದರ ವಿನಿಯಮಗಳು" ಎಂದರೆ ಆಗಾಗ್ಗೆ ತಿದ್ದುಪಡಿಯಾದಂತೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ದರ ಪಟ್ಟಿ) ವಿನಿಯಮಗಳು.

ಜಡ್ ಐ) 'ವ್ಯಾಪಾರದಾರ' ಎಂದರೆ ವಿದ್ಯುಚ್ಛಕ್ತಿ ಮಾರಾಟಕ್ಕಾಗಿ ಲೈಸೆನ್ಸಿನ ಮೂಲಕ ಪ್ರಾಧಿಕೃತಗೊಂಡ ಯಾವುದೇ ವ್ಯಕ್ತಿ.

ಜಡ್‌ಜೆ) 'ಪ್ರಸರಣ ಪದ್ಧತಿ' ಎಂದರೆ 66 ಕೆ.ವಿ. ವೋಲ್ಟೇಜ್ ಮತ್ತು ಅದಕ್ಕೂ ಹೆಚ್ಚಿನ ವಿನ್ಯಾಸಗೊಳಿಸಿರುವಲ್ಲಿ ಮುಖ್ಯವಾಗಿ ಸ್ವಾಮ್ಯದಲ್ಲಿ ಸೇರಿರುವ ಹೆಚ್ಚುವರಿ ಹೈವೋಲ್ಟೇಜ್ ವಿದ್ಯುತ್ ಮಾರ್ಗಗಳು ಮತ್ತು ಪ್ರಸರಣ ಹೊಂದಿರುವ ಎಲ್ಲಾ ಘಟಕಗಳು, ಉಪಕರಣಗಳು ಮತ್ತು ಕಟ್ಟಡಗಳು ಸೇರಿಕೊಂಡಿರತಕ್ಕದ್ದು.

ಒ.) ಜಡ್‌ಕೆ) 'ಜನೋಪಯೋಗಿ ಸಂಸ್ಥೆ' ಎಂದರೆ ಅಧಿನಿಯಮದ ಉಪಬಂಧಗಳನುಸಾರ ವ್ಯಕ್ತಿ ಉತ್ಪಾದನಾ ಕಂಪನಿ ಅಥವಾ ಲೈಸೆನ್ಸುದಾರನಾಗಿ ನಿರ್ವಹಿಸುವ ಯಾವುದೇ ವ್ಯಕ್ತಿಗೆ ಸೇರಿದ ಎಲ್ಲಾ ಭೂಮಿ, ಕಟ್ಟಡಗಳು, ಕೆಲಸಗಳು ಮತ್ತು ವಸ್ತುಗಳೂ ಸೇರಿದಂತೆ ವಿದ್ಯುತ್ ಮಾರ್ಗಗಳು ಅಥವಾ ವಿದ್ಯುತ್ ಘಟಕ.

ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು ಈ ಲೈಸೆನ್ಸಿನಲ್ಲಿ ಷರತ್ತುಗಳಿಗೆ ಮತ್ತು ಅದರ ಭಾಗಗಳಿಗೆ ಮಾಡಲಾದ ಉಲ್ಲೇಖಗಳು ಈ ಲೈಸೆನ್ಸಿನ ಷರತ್ತುಗಳು ಮತ್ತು ಅದರ ಭಾಗಗಳಿಗೆ ಮಾಡಲಾದ ಉಲ್ಲೇಖಗಳು ಎಂಬುದಾಗಿ ಅರ್ಥೈಸತಕ್ಕದ್ದು.

2. ಅನುಮತಿ ಪಡೆದ ಚಟುವಟಿಕೆ

2.1. ಈ ಲೈಸೆನ್ಸಿನ ಷರತ್ತುಗಳಡಿಯಲ್ಲಿ ಲೈಸೆನ್ಸುದಾರನು ಈ ಮುಂದಿನ ಚಟುವಟಿಕೆಗಳನ್ನು ನಿರ್ವಹಿಸಲು ಅನುಮತಿಸಿದೆ :

ಎ) ಷರತ್ತು 2.2 ರಲ್ಲಿ ನಿರ್ದಿಷ್ಟಪಡಿಸಿರುವ ಸರಬರಾಜು ಪ್ರದೇಶದಲ್ಲಿನ ಗ್ರಾಹಕರಿಗೆ ವಿದ್ಯುತ್ ವಿತರಣೆ

ಬಿ) ವಿದ್ಯುಚ್ಛಕ್ತಿ ವ್ಯಾಪಾರ

2.2 ಸರಬರಾಜು ಪ್ರದೇಶ.

ಪ್ರತಿ ವಿದ್ಯುತ್ ಸರಬರಾಜು ಕಂಪನಿಗಳ ಮುಂದೆ ಸರಬರಾಜು ಪ್ರದೇಶದಲ್ಲಿ ಒಳಗೊಂಡಿರುವ ಜಿಲ್ಲೆಗಳನ್ನು ಉಲ್ಲೇಖಿಸಲಾಗಿದೆ :

ಎ) ಬೆಸ್ಕಾಂ – ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ತುಮಕೂರು, ಕೋಲಾರ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳು.

ಬಿ) ಮೆಸ್ಕಾಂ – ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಾಸನ, ಕೊಡಗು, ಮಂಡ್ಯ, ಮೈಸೂರು ಮತ್ತು ಚಾಮರಾಜನಗರ.

ಸಿ) ಹೆಸ್ಕಾಂ – ಧಾರವಾಡ, ಗದಗ, ಹಾವೇರಿ, ಬಿಜಾಪುರ, ಬಾಗಲಕೋಟೆ, ಬೆಳಗಾವಿ ಮತ್ತು ಉತ್ತರ ಕನ್ನಡ.

ಡಿ) ಗೆಸ್ಕಾಂ – ಗುಲ್ಬರ್ಗಾ, ಬೀದರ್, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ.

## ಭಾಗ – II

## ಸಾಮಾನ್ಯ ಷರತ್ತುಗಳು

3. ವಿನಿಯಮಗಳು, ಸಂಹಿತೆಗಳು, ಆದೇಶಗಳು ಮತ್ತು ನಿರ್ದೇಶನಗಳ ಪಾಲನೆ.

3.1 ಲೈಸೆನ್ಸುದಾರನು, ಅಧಿನಿಯಮದ ಉದ್ದೇಶಗಳನ್ನು ಸಾಧಿಸುವುದಕ್ಕಾಗಿ ಕಾಲಕಾಲಕ್ಕೆ ಆಯೋಗವು ಪರಿಗಣಿಸಬಹುದಾದ ಹಾಗೂ ಆಯೋಗವು ಬಿಡುಗಡೆಗೊಳಿಸಿರುವ ವಿನಿಯಮಗಳು, ಸಂಹಿತೆಗಳು, ಆದೇಶಗಳು, ಮಾರ್ಗಸೂಚಿಗಳು ಮತ್ತು ನಿರ್ದೇಶನಗಳನ್ನು ಪಾಲಿಸತಕ್ಕದ್ದು ಹಾಗೂ ಅಂತಹ ವಿನಿಯಮಗಳು, ಸಂಹಿತೆಗಳು, ಆದೇಶಗಳು, ಮಾರ್ಗಸೂಚಿಗಳು ಮತ್ತು ನಿರ್ದೇಶನಗಳ ಉಲ್ಲಂಘನೆಗೆ ಆಯೋಗದಿಂದ ಪೂರ್ವಾನುಮೋದನೆಯನ್ನು ಲೈಸೆನ್ಸುದಾರನು ಪಡೆಯುವುದನ್ನು ಹೊರತುಪಡಿಸಿ, ಈ ಲೈಸೆನ್ಸಿನ ಷರತ್ತುಗಳ ಅನುಸಾರವಾಗಿ ಕಾರ್ಯನಿರ್ವಹಿಸತಕ್ಕದ್ದು.

3.2 ಲೈಸೆನ್ಸುದಾರನು ವೇದಿಕೆ ಅಥವಾ ಓಂಬಡ್ಸ್‌ಮನ್ ನೀಡುವ ಆದೇಶಗಳು ಅಥವಾ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

4 ಪೂರ್ವ ಸಮ್ಮತಿ ಅಗತ್ಯವಿರುವ ಕೆಲಸಗಳು :

4.1. ಆಯೋಗದ ಪೂರ್ವಾನುಮೋದನೆ ಪಡೆಯದೆ ಈ ಮುಂದಿನ ಕೆಲಸಗಳನ್ನು ಲೈಸೆನ್ಸುದಾರನು ನಿರ್ವಹಿಸತಕ್ಕದ್ದಲ್ಲ :

ಎ) ಯಾವುದೇ ಇತರ ಲೈಸೆನ್ಸುದಾರರ ಸಂಸ್ಥೆಯ ಖರೀದಿ ಅಥವಾ ವಶಕ್ಕೆ ಪಡೆಯುವುದು ಅಥವಾ ಅನ್ಯಥಾ ಮಾರ್ಗದ ಮೂಲಕ ಪಡೆಯಲು ಯಾವುದೇ ವ್ಯವಹರಣೆ.

ಬಿ) ಯಾವುದೇ ಇತರ ಲೈಸೆನ್ಸುದಾರರ ಸಂಸ್ಥೆಯೊಂದಿಗೆ ತನ್ನ ಸಂಸ್ಥೆಯ ವಿಲೀನ.

ಪರಂತು, ಕಂಡಿಕೆ(ಎ) ಅಥವಾ ಕಂಡಿಕೆ (ಬಿ) ಅನ್ವಯವಾಗುವಂತೆ ಸಂಸ್ಥೆಯು ಹೊರ ರಾಜ್ಯದಲ್ಲಿದ್ದು, ರಾಜ್ಯದೊಂದರಲ್ಲಿ ಲೈಸೆನ್ಸುದಾರನ ಸಂಸ್ಥೆಯು ಸ್ಥಾಪಿತವಾಗಿದ್ದಲ್ಲಿ ಈ ಷರತ್ತಿನಲ್ಲಿರುವ ಅಂಶಗಳನ್ನು ಅನ್ವಯಿಸತಕ್ಕದ್ದಲ್ಲ.

4.2. ಲೈಸೆನ್ಸುದಾರನು ಯಾವುದೇ ಸಮಯದಲ್ಲಿ ತನ್ನ ಲೈಸೆನ್ಸನ್ನು ಹಂಚಿಕೊಡುವುದು ಅಥವಾ ತನ್ನ ಸಂಸ್ಥೆಯನ್ನು ವರ್ಗಾಯಿಸುವುದು, ಅಥವಾ ಅದರ ಯಾವುದೇ ಭಾಗವನ್ನು ಮಾರಾಟ, ಗುತ್ತಿಗೆ, ವಿನಿಮಯ ಅಥವಾ ಅನ್ಯಥಾ ರೀತಿಯಲ್ಲಿ ಆಯೋಗದ ಪೂರ್ವಾನುಮೋದನೆಯಿಲ್ಲದೆ ಮಾಡತಕ್ಕದ್ದಲ್ಲ.

4.3. ಆಯೋಗದ ಪೂರ್ವಾನುಮೋದನೆಯಿಲ್ಲದೆ ಮಾಡಿದ ಹೊರತು ಈ ಮೇಲಿನ 4.1 ಅಥವಾ 4.2 ರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವ್ಯವಹರಣೆಗೆ ಸಂಬಂಧಿಸಿದ ಯಾವುದೇ ಒಪ್ಪಂದ ಅನೂರ್ಜಿತಗೊಳ್ಳತಕ್ಕದ್ದು.

4.4. ಲೈಸೆನ್ಸುದಾರರು ಆಯೋಗದಿಂದ ಮೇಲಿನ 4.1 ರಂತೆ ಅನುಮೋದನೆ ಪಡೆಯುವುದಕ್ಕಿಂತ ಮೊದಲು, ಅಂತಹ ಅನುಮೋದನೆಗೆ ಸಲ್ಲಿಸುವ ಅಂತಹ ಲೈಸೆನ್ಸುದಾರರ ಪ್ರದೇಶದಲ್ಲಿ ವಿದ್ಯುಚ್ಛಕ್ತಿ ಪ್ರಸರಣ ಅಥವಾ ವಿತರಿಸುವ ಪ್ರತಿ ಇತರ ಲೈಸೆನ್ಸುದಾರರಿಗೆ ಒಂದು ತಿಂಗಳಿಗೆ ಕಡಿಮೆಯಿಲ್ಲದಂತೆ ಸೂಚನೆ ನೀಡ ತಕ್ಕದ್ದು.

4.5. ಪೂರ್ವಾನುಮೋದನೆ ಅಗತ್ಯಪಡಿಸುವಲ್ಲಿ, ಲೈಸೆನ್ಸುದಾರನು ಅದರ ಪರವಾಗಿ ಸಂಗತವಾದ ಮಾಹಿತಿಯನ್ನು ಪ್ರಕಟಪಡಿಸಿ ಆಯೋಗದಲ್ಲಿ ಸೂಕ್ತ ಅರ್ಜಿಯನ್ನು ಸಲ್ಲಿಸತಕ್ಕದ್ದು, ಆಯೋಗವು ಅಂತಹ ಅರ್ಜಿ ಸ್ವೀಕರಿಸಿದ ಮೂರು ತಿಂಗಳೊಳಗೆ ಅದನ್ನು ಇತ್ಯರ್ಥ ಪಡಿಸತಕ್ಕದ್ದು.

5. ಲೈಸೆನ್ಸುದಾರರ ಕರ್ತವ್ಯಗಳು :

5.1. ಲೈಸೆನ್ಸುದಾರನು ತನ್ನ ಸರಬರಾಜು ಪ್ರದೇಶದಲ್ಲಿ ದಕ್ಷ, ಸಮನ್ವಯತೆ ಮತ್ತು ಮಿತವ್ಯಯ ವಿತರಣಾ ಪದ್ಧತಿಯನ್ನು ಅಭಿವೃದ್ಧಿ ಪಡಿಸಿ ಮತ್ತು ನಿರ್ವಹಿಸುವುದು ಮತ್ತು ಅಧಿನಿಯಮದಲ್ಲಿನ ಉಪಬಂಧಗಳನುಸಾರ ವಿದ್ಯುಚ್ಛಕ್ತಿ ಸರಬರಾಜು ಮಾಡುವುದು ಆತನ ಕರ್ತವ್ಯವಾಗಿರತಕ್ಕದ್ದು.

5.2. ಲೈಸನ್ಸಿನ ಇತರ ಉಪಬಂಧಗಳು ಮತ್ತು ಜಾರಿಯಲ್ಲಿರುವ ಇತರ ವಿನಿಯಮಗಳಿಗೊಳಪಟ್ಟು, ಲೈಸೆನ್ಸುದಾರನು ತನ್ನ ಸರಬರಾಜು ಪ್ರದೇಶದ ಯಾವುದೇ ಆವರಣದ ಮಾಲೀಕ ಅಥವಾ ಅನುಭೋಗದಾರನ ಅರ್ಜಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗಾಗಿ ಅಂತಹ ಆವರಣಕ್ಕೆ ವಿದ್ಯುಚ್ಛಕ್ತಿ ಸರಬರಾಜು ಒದಗಿಸತಕ್ಕದ್ದು.

ಪರಂತು, ಅಂತಹ ವಿದ್ಯುಚ್ಛಕ್ತಿ ಸರಬರಾಜು ಮಾಡಲು ವಿತರಣ ಮುಖ್ಯದ ವಿಸ್ತರಣೆ ಅಥವಾ ಹೊಸ ಉಪ ಕೇಂದ್ರದ ಸ್ಥಾಪನೆಯು ಅಗತ್ಯವಾಗಿದ್ದರೆ, ವಿತರಣ ಲೈಸೆನ್ಸುದಾರನು, ಆಯೋಗವು ನಿರ್ದಿಷ್ಟಪಡಿಸಬಹುದಾದ ಅವಧಿಯೊಳಗೆ ಅಂತಹ ವಿಸ್ತರಣೆ ಅಥವಾ ಸ್ಥಾಪಿಸಿದ ನಂತರ ಕೂಡಲೇ ಅಂತಹ ಆವರಣಕ್ಕೆ ವಿದ್ಯುಚ್ಛಕ್ತಿ ಸರಬರಾಜು ಒದಗಿಸತಕ್ಕದ್ದು.

5.3. ಷರತ್ತು 5.2ರ ನಿಬಂಧನೆಗಳಂತೆ, ಸಂಪರ್ಕ ಪಡೆಯಲು ಯಾವುದೇ ಆವರಣದ ಮಾಲೀಕ ಅಥವಾ ಅನುಭೋಗದಾರನಿಗೆ ಅಗತ್ಯವಾಗಿದ್ದರೆ, ಅರ್ಜಿಯ ರೂಪದಲ್ಲಿ ಕೋರಿಕೆ ಸಲ್ಲಿಸಬೇಕು ಮತ್ತು ಆಯೋಗದಿಂದ ಅನುಮೋದಿತ ರೀತಿಯನುಸಾರ ಅರ್ಜಿಗೆ ಪ್ರತಿಕ್ರಿಯಿಸುವ ವಿಧಾನ ಅನುಸರಿಸತಕ್ಕದ್ದು.

5.4. ಈ ಮೇಲಿನ 5.2ರಲ್ಲಿ ನಿರ್ದಿಷ್ಟಪಡಿಸಿದಂತೆ, ಅಗತ್ಯಬಿದ್ದರೆ ಯಾವುದೇ ವಿದ್ಯುತ್ ಘಟಕ ಅಥವಾ ವಿದ್ಯುತ್ ಸರಬರಾಜನ್ನು ಗ್ರಾಹಕನ ಆವರಣಕ್ಕೆ ನೀಡುವುದು ವಿತರಣ ಲೈಸೆನ್ಸುದಾರನ ಕರ್ತವ್ಯವಾಗಿರತಕ್ಕದ್ದು.

ಪರಂತು, ಆಯೋಗದಿಂದ ನಿಗದಿಪಡಿಸಿದ ದರವನ್ನು ಲೈಸೆನ್ಸುದಾರನಿಗೆ ನೀಡುತ್ತೇನೆಂದು ಒಪ್ಪದ ಹೊರತು ಗ್ರಾಹಕನ ಯಾವುದೇ ಪ್ರದೇಶದಲ್ಲಿ ಪ್ರತ್ಯೇಕವಾದ ಸರಬರಾಜಿಗಾಗಿ ಲೈಸೆನ್ಸುದಾರನಿಂದ ವಿದ್ಯುತ್ ಸರಬರಾಜು ಪಡೆಯಲು ಯಾವುದೇ ವ್ಯಕ್ತಿ ಕೋರಲು ಅಥವಾ ಮುಂದುವರಿಸಲು ಅಥವಾ ಸ್ವೀಕರಿಸಲು ಅರ್ಹನಾಗಿರತಕ್ಕದ್ದಲ್ಲ.

5.5. ಅನ್ವಯವಾಗುವ ವಿನಿಯಮಗಳು, ನಿರ್ದೇಶನಗಳು ಮತ್ತು ಅನಿವಾರ್ಯ ಘಟನೆಗಳ ಪರಿಸ್ಥಿತಿಗಳಿಗೆ ಒಳಪಟ್ಟು ಲೈಸೆನ್ಸುದಾರರು ಗ್ರಾಹಕರಿಗೆ ಸೂಕ್ತ ಗುಣಮಟ್ಟದ ವಿದ್ಯುತ್ ಸರಬರಾಜಿಗಾಗಿ ಸಾಕಷ್ಟು ವಿದ್ಯುತ್ ಪಡೆಯಲು ಯಾವಾಗಲೂ ಪ್ರಯತ್ನಿಸಬೇಕು.

5.6. ಲೈಸೆನ್ಸುದಾರನು ಅಧಿನಿಯಮದ 42(2) ಪ್ರಕರಣದಡಿಯಲ್ಲಿ ಅಗತ್ಯಪಡಿಸುವಂತೆ ಯಾವುದೇ ವ್ಯಕ್ತಿಗೆ ವಿತರಣ ಪದ್ಧತಿಯಿಂದ ಮುಕ್ತ ಅವಕಾಶ ಒದಗಿಸತಕ್ಕದ್ದು ಮತ್ತು ಆಯೋಗ ನಿರ್ದಿಷ್ಟಪಡಿಸಿದಂತೆ ವ್ಹೀಲಿಂಗ್ ಶುಲ್ಕಗಳು ಮತ್ತು/ಅಥವಾ ಸರ್ಚಾರ್ಜ್ ಸ್ವೀಕರಿಸತಕ್ಕದ್ದು.

6. ಲೈಸೆನ್ಸುದಾರರ ಇತರ ಚಟುವಟಿಕೆಗಳು

6.1. ಲೈಸೆನ್ಸುದಾರರು ಈ ಮುಂದಿನ ಷರತ್ತುಗಳಿಗೊಳಪಟ್ಟು, ಅಧಿನಿಯಮದ 51ನೇ ಪ್ರಕರಣದಲ್ಲಿ ಒದಗಿಸಿರುವಂತೆ ವಿತರಣ ಪದ್ಧತಿಯಲ್ಲಿ ಸೇರಿರುವ ಆಸ್ತಿ ಮತ್ತು ಮೂಲಭೂತ ಸೌಲಭ್ಯಗಳ ಗರಿಷ್ಠ ಬಳಕೆಗಾಗಿ ಯಾವುದೇ ಇತರ ವ್ಯವಹಾರದಲ್ಲಿ ಆಯೋಗದ ಪೂರ್ವಾನುಮೋದನೆಯೊಂದಿಗೆ ತೊಡಗಬಹುದಾಗಿದೆ.

(ಎ) ಲೈಸೆನ್ಸುದಾರರು ನಡೆಸುವ ವಿತರಣ ವ್ಯವಹಾರ ಮತ್ತು ಅದನ್ನು ನಡೆಸುವಿಕೆಗೆ ಯಾವುದೇ ದೃಷ್ಟಿಯಲ್ಲಿ ಪೂರ್ವಾಗ್ರಹ ಪೀಡಿತ ಮತ್ತು/ಅಥವಾ ಪ್ರತಿರೋಧಕವಾಗಿ ಬಾಧಕವಾಗಬಾರದು;

(ಬಿ) ಆಯೋಗವು ನಿರ್ದಿಷ್ಟಪಡಿಸಬಹುದಾದಂತೆ, ಅಂತಹ ವ್ಯವಹಾರಗಳಿಂದ ಬರುವ ಆದಾಯದ ಒಂದು ಭಾಗವನ್ನು ಲೈಸೆನ್ಸುದಾರನ ವೀಲ್ಡಿಂಗ್ ಶುಲ್ಕಗಳನ್ನು ಕಡಿಮೆ ಮಾಡುವುದಕ್ಕೆ ಬಳಸಬಹುದಾಗಿದೆ;

(ಸಿ) ಲೈಸೆನ್ಸುದಾರನು, ವಿತರಣ ವ್ಯವಹಾರ ಇಲ್ಲವೇ ಸಬ್ಸಿಡಿಗಳು ಯಾವುದೇ ರೀತಿಯಲ್ಲಿ ಅಂತಹ ವ್ಯವಹಾರ ಕೈಗೆತ್ತಿಗೊಳ್ಳುವ ಇಲ್ಲವೇ ತೊಡಗುವ ತನ್ನ ವಿತರಣ ಆಸ್ತಿಗಳು ಯಾವುದೇ ರೀತಿಯಲ್ಲಿ ಇತರ ವ್ಯವಹಾರಕ್ಕೆ ಬೆಂಬಲವಾಗಿ ಇವೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳಲು ಕೈಗೆತ್ತಿಕೊಳ್ಳುವ ಪ್ರತಿ ಅಂತಹ ವ್ಯವಹಾರಕ್ಕಾಗಿ ಪ್ರತ್ಯೇಕವಾದ ಲೆಕ್ಕಗಳನ್ನು ನಿರ್ವಹಿಸತಕ್ಕದ್ದು.

(ಡಿ) ಈ ಸಂಬಂಧದಲ್ಲಿ ಆಯೋಗವು ನಿರ್ದಿಷ್ಟಪಡಿಸಬಹುದಾದಂತಹ ಅಂತಹ ಮಾರ್ಗಸೂಚಿಗಳನ್ನು ಲೈಸೆನ್ಸುದಾರನು ಯಾವಾಗಲೂ ಪಾಲಿಸತಕ್ಕದ್ದು.

6.2. ಲೈಸೆನ್ಸುದಾರನು, ಯಾವುದೇ ಸಾಲಕ್ಕಾಗಿ ಒಪ್ಪಂದ ಮಾಡಿಕೊಳ್ಳುವುದು ಅಥವಾ ಯಾವುದೇ ವ್ಯಕ್ತಿಯ ಯಾವುದೇ ಹೊಣೆಗಾಗಿ ಯಾವುದೇ ಖಾತರಿ ನೀಡುವುದಕ್ಕಾಗಿ ಕಂಪನಿಗಳ ಅಧಿನಿಯಮ, 1956ರ ಉಪಬಂಧಗಳನ್ನು ಅನುಸರಿಸತಕ್ಕದ್ದು ಮತ್ತು ಯಾವುದೇ ಉಲ್ಲಂಘನೆಯ ಪ್ರಕರಣದಲ್ಲಿ ಲೈಸೆನ್ಸುದಾರನು ಆಯೋಗದ ಪೂರ್ವಾನುಮೋದನೆಯನ್ನು ಪಡೆಯತಕ್ಕದ್ದು.

6.3. ಲೈಸೆನ್ಸುದಾರನು, ಅಧಿನಿಯಮದಂತೆ ಅಧಿಕೃತವಾಗಿ ನಿರ್ವಹಿಸುವ ಅಥವಾ ಮಾಡುವ ಯಾವುದೇ ಪ್ರಕಾರ್ಯಗಳನ್ನು ಮಾತ್ರ ಯಾವುದೇ ಇತರ ವ್ಯಕ್ತಿಗೆ ಅಧಿಕೃತಗೊಳಿಸಬಹುದಾಗಿದೆ. ಪರಂತು, (ಎ) ಲೈಸೆನ್ಸಿನ ಈ ಷರತ್ತುಗಳಂತೆ ಮತ್ತು ಲೈಸೆನ್ಸುದಾರನ ಸಾಮಾನ್ಯ ಉಸ್ತುವಾರಿ ಮತ್ತು ನಿಯಂತ್ರಣದಲ್ಲಿ ಯಾವುದೇ ಇತರ ಅಂತಹ ವ್ಯಕ್ತಿ ಕಾರ್ಯ ನಿರ್ವಹಿಸತಕ್ಕದ್ದು; ಮತ್ತು

ಬಿ) ಯಾವುದೇ ಕಾರ್ಯವನ್ನು ಮತ್ತೊಬ್ಬರಿಗೆ ವಹಿಸುವ ಮುಂಚಿತವಾಗಿ ಲೈಸೆನ್ಸುದಾರನು ಅಂತಹ ಕ್ರಮದ ಬಗ್ಗೆ ಆಯೋಗಕ್ಕೆ ತಿಳಿಸತಕ್ಕದ್ದು.

ಸಿ) ಅಂತಹ ಇತರ ವ್ಯಕ್ತಿಯ ಎಲ್ಲಾ ಕೆಲಸಗಳಿಗೆ ಲೈಸೆನ್ಸುದಾರನು ಜವಾಬ್ದಾರನಾಗಿರತಕ್ಕದ್ದು.

7. ಸರಬರಾಜಿನ ಷರತ್ತುಗಳು

7.1. ಲೈಸೆನ್ಸುದಾರನು, ಈ ಲೈಸೆನ್ಸಿನ ಷರತ್ತುಗಳು ಜಾರಿಗೆ ಬಂದ ಮೂರು ತಿಂಗಳೊಳಗಾಗಿ ಆಯೋಗದ ಅನುಮೋದನೆಗಾಗಿ ಪ್ರಮಾಣಿತ ಒಪ್ಪಂದಗಳೊಂದಿಗೆ ಕಾರ್ಯಾಚರಣಾ ವಿಧಾನಗಳು ಮತ್ತು ಸಂಪರ್ಕ ನೀತಿಗಳನ್ನು ವಿವರಿಸುವ ಸರಬರಾಜಿನ ಮಾದರಿ ಷರತ್ತುಗಳನ್ನು ಸಲ್ಲಿಸತಕ್ಕದ್ದು.

7.2. ಆಯೋಗವು ಅನುಮೋದನೆ ನೀಡುವುದಕ್ಕೆ ಮುಂಚಿತವಾಗಿ ಮುಂದೆ ಈ ಮೇಲೆ ನಿರ್ದಿಷ್ಟಪಡಿಸಿದ ಕರಡುಗಳು, ಅನ್ಯಾಯ ಅಥವಾ ಅಸಮಂಜಸವಾಗುತ್ತವೆಯೆಂದು ಗುರುತಿಸಿದರೆ ಆ ಕರಡುಗಳನ್ನು ತಿದ್ದುಪಡಿ ಮಾಡಬೇಕೆಂದು ಲೈಸೆನ್ಸುದಾರರಿಗೆ ನಿರ್ದೇಶಿಸತಕ್ಕದ್ದು. ಆಯೋಗದಿಂದ ಕರಡುಗಳು ಅನುಮೋದನೆಯಾದ ನಂತರ ಲೈಸೆನ್ಸುದಾರರು ಬಳಕೆಗಾಗಿ ದಸ್ತಾವೇಜುಗಳನ್ನು ಅಧಿಸೂಚಿಸತಕ್ಕದ್ದು.

7.3. ಆಯೋಗವು, ಲೈಸೆನ್ಸುದಾರ ಅಥವಾ ಬಾಧಿತ ವ್ಯಕ್ತಿಗಳ ಅರ್ಜಿಯ ಮೇಲೆ, ಮೇಲಿನ ದಸ್ತಾವೇಜುಗಳಲ್ಲಿ ಅಂತಹ ಬದಲಾವಣೆ ಮತ್ತು ತಿದ್ದುಪಡಿಗಳು ಅರ್ಹವೆಂದು ಭಾವಿಸಿದಲ್ಲಿ ಮಾಡಬಹುದಾಗಿದೆ.

8. ಸಹಾಯಧನದ ನಿಷೇಧ :

ಲೈಸೆನ್ಸುದಾರರು, ಆಯೋಗದ ಪೂರ್ವಾನುಮೋದನೆಯಿಲ್ಲದೆ, ಕೆ.ವಿ.ಸು. ಅಧಿನಿಯಮದ 12(1)ಪ್ರಕರಣ/ಅಧಿನಿಯಮದ 65ನೇ ಪ್ರಕರಣ ಅಥವಾ ಕೆ.ವಿ.ಸು. ಅಧಿನಿಯಮದ 28(1) ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ಮಂಜೂರಾದ ಸಹಾಯಧನ ಹೊರತುಪಡಿಸಿ ಯಾವುದೇ ವ್ಯಕ್ತಿಯಿಂದ ಯಾವುದೇ ಸಹಾಯಧನವನ್ನು ಸ್ವೀಕರಿಸತಕ್ಕದ್ದಲ್ಲ.

9. ಅಧಿಕ ಕರಡ ಬಳಕೆ :

ಲೈಸೆನ್ಸುದಾರರು, ಷರತ್ತು 5.6ಕ್ಕೆ ಸಂಬಂಧಪಟ್ಟಂತೆ ಸಂಗ್ರಹವಾದ ಅಧಿಕ ಕರಡ ಮೊತ್ತಕ್ಕೆ ಪ್ರತ್ಯೇಕ ಲೆಕ್ಕವಿಡತಕ್ಕದ್ದು ಮತ್ತು ಆಯೋಗ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಅದನ್ನು ಬಳಸಬೇಕು.

10. ಲೆಕ್ಕಪತ್ರಗಳು

10.1. ಲೈಸೆನ್ಸುದಾರನ ಆರ್ಥಿಕ ವರ್ಷ ಯಾವಾಗಲೂ ಏಪ್ರಿಲ್ ಒಂದರಿಂದ ನಂತರದ ಮಾರ್ಚ್ ಮೂವತ್ತೊಂದರವರೆಗೆ ಇರತಕ್ಕದ್ದು.

10.2. ಲೈಸೆನ್ಸುದಾರನು ಪ್ರತಿಯೊಂದು ಪ್ರತ್ಯೇಕ ವ್ಯವಹಾರಕ್ಕೆ ಸಂಬಂಧಪಟ್ಟಂತೆ :

ಎ) ಅಂತಹ ಪ್ರತ್ಯೇಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಇಡಬೇಕಾದಂತಹ ಲೆಕ್ಕ ಪತ್ರಗಳನ್ನು, ಅದನ್ನು ಪ್ರತ್ಯೇಕ ಕಂಪನಿಯು ನಡೆಸುತ್ತಿದ್ದರೆ ಅಂತಹ ಕಂಪನಿ ಇಡಬೇಕಾದಂತಹ ಲೆಕ್ಕಪತ್ರಗಳ ದಾಖಲೆಯನ್ನು ಸಿದ್ಧಪಡಿಸಿ ಇಡತಕ್ಕದ್ದು. ಹಾಗೆ ಇಟ್ಟರೆ ಅಂತಹ ಪ್ರತಿಯೊಂದು ಪ್ರತ್ಯೇಕ ವ್ಯವಹಾರಕ್ಕೆ ಸಂಬಂಧಿಸಿದ್ದೆನ್ನಬಹುದಾದ ಆದಾಯಗಳನ್ನು, ವೆಚ್ಚಗಳನ್ನು ಆಸ್ತಿಗಳನ್ನು, ಹೊಣೆಗಳನ್ನು ಮತ್ತು ವಿಭಾಗಗಳನ್ನು ಯುಕ್ತವಾಗಿ ಲೈಸೆನ್ಸುದಾರನು ನಿರತನಾಗಿರುವ ಇತರ ಯಾವುದೇ ವ್ಯವಹಾರದಿಂದ ಪ್ರತ್ಯೇಕವಾಗಿ ಗುರುತಿಸಬಹುದಾಗಿದೆ.

ಬಿ) ಅಂತಹ ಲೆಕ್ಕಪತ್ರ ದಾಖಲೆಗಳಿಂದ ಈ ಮುಂದಿನವುಗಳನ್ನು ಸುಸಂಗತ ಆಧಾರದಲ್ಲಿ ಸಿದ್ಧಪಡಿಸಿ ಆಯೋಗಕ್ಕೆ ಸಲ್ಲಿಸತಕ್ಕದ್ದು :

i) ಲೆಕ್ಕ ಪತ್ರದ ವಿವರಣಾ ಪಟ್ಟಿಗಳು

ii) ಪ್ರತಿಯೊಂದು ಆರ್ಥಿಕ ವರ್ಷದ ಪ್ರತಿ ಆರು ತಿಂಗಳುಗಳಿಗೆ ಸಂಬಂಧಪಟ್ಟಂತೆ ಕಾಲಕಾಲಕ್ಕೆ ಆಯೋಗವು ಗೊತ್ತುಪಡಿಸಬಹುದಾದ ಸಹಾಯಕ ದಸ್ತಾವೇಜುಗಳು ಮತ್ತು ಮಾಹಿತಿಯೊಂದಿಗೆ ಒಂದು ತಾತ್ಕಾಲಿಕ ಲಾಭ ಮತ್ತು

ನಷ್ಟದ ಲೆಕ್ಕಪತ್ರ, ಹಣ ಸ್ವೀಕಾರ ವಿವರಣ ಪತ್ರ, ಜಮಾ ಖರ್ಚು ಪಟ್ಟಿಗಳ ವಿವರ ಪಟ್ಟಿಗಳು ಮತ್ತು ದಸ್ತಾವೇಜುಗಳನ್ನು ಪ್ರಕಟಿಸಬೇಕು.

iii) ಈ ಷರತ್ತಿನ ಅನುಸಾರವಾಗಿ ಸಿದ್ಧಪಡಿಸಿದ ಲೆಕ್ಕಪತ್ರ ವಿವರಣ ಪತ್ರಗಳಿಗೆ ಸಂಬಂಧಪಟ್ಟಂತೆ ಲೆಕ್ಕ ಪರಿಶೋಧಕರ ಅಭಿಪ್ರಾಯದಲ್ಲಿ ಈ ವಿವರಣ ಪತ್ರಗಳನ್ನು ಈ ಷರತ್ತಿನ ಅನುಸಾರವಾಗಿ ಸೂಕ್ತವಾಗಿ ಸಿದ್ಧಪಡಿಸಲಾಗಿದೆಯೇ ಹಾಗೂ ಆದಾಯಗಳು, ವೆಚ್ಚಗಳು, ಆಸ್ತಿಗಳು, ಹೊಣೆಗಳು, ಮೀಸಲುಗಳು ಮತ್ತು ಏರ್ಪಾಟುಗಳ ಬಗ್ಗೆ ನಿಜವಾದ ಮತ್ತು ನ್ಯಾಯಯುತವಾದ ಚಿತ್ರಣವನ್ನು ಕೊಡುತ್ತವೆಯೇ ಅಥವಾ ವಿವರಣ ಪತ್ರವು ಸಂಬಂಧಪಟ್ಟ ಪ್ರತ್ಯೇಕ ವ್ಯವಹಾರಕ್ಕೆ ಯುಕ್ತವಾಗಿ ಸಂಬಂಧಪಟ್ಟಿದೆಯೇ ಎಂಬುದನ್ನು ತಿಳಿಸಿ, ಪ್ರತಿಯೊಂದು ಆರ್ಥಿಕ ವರ್ಷದ ಲೆಕ್ಕ ಪರಿಶೋಧಕರ ವರದಿ ಮತ್ತು,

iv) ಅದು ಯಾವ ಅವಧಿಗೆ ಸಂಬಂಧಿಸಿದೆಯೋ, ಆ ಅವಧಿಯು ಕೊನೆಗೊಂಡ ನಂತರ ನಲ್ವತ್ತೈದು ದಿನಗಳಿಗೆ ಮೀರದ ಅವಧಿಯೊಳಗೆ ಪ್ರತಿಯೊಂದು ತಾತ್ಕಾಲಿಕ ಲಾಭ ಮತ್ತು ನಷ್ಟದ ಲೆಕ್ಕಪತ್ರದ ಒಂದು ಪ್ರತಿ ಮತ್ತು ಅದು ಯಾವ ಹಣಕಾಸು ವರ್ಷಕ್ಕೆ ಸಂಬಂಧಿಸಿದೆಯೋ, ಆ ಹಣಕಾಸು ವರ್ಷ ಕೊನೆಗೊಂಡ ನಂತರ ಆರು ತಿಂಗಳಿಗೆ ಮೀರದ ಅವಧಿಯೊಳಗೆ ಲೆಕ್ಕಪತ್ರದ ವಿವರಣ ಪತ್ರ ಮತ್ತು ಲೆಕ್ಕ ಪರಿಶೋಧಕರ ವರದಿಯ ಪ್ರತಿಗಳು .

10.3. ಲೈಸೆನ್ಸುದಾರರು ಆಯೋಗದಿಂದ ಮುಂಚಿತವಾಗಿ ಅನುಮೋದನೆ ಪಡೆಯದೆ ಹಣಕಾಸು ವರ್ಷಕ್ಕೆ ಲೆಕ್ಕಪತ್ರ ವಿವರಣ ಪತ್ರವನ್ನು ಸಿದ್ಧಪಡಿಸುವುದಕ್ಕೆ ಸಂಬಂಧಪಟ್ಟಂತೆ, ಹಿಂದಿನ ಹಣಕಾಸು ವರ್ಷಕ್ಕೆ ಅನ್ವಯಿಸಿದ ಚಾರ್ಜು ಅಥವಾ ಪಾಲು ಅಥವಾ ಹಂಚಿಕೆ ಆಧಾರಗಳನ್ನು ಬದಲಾಯಿಸತಕ್ಕದ್ದಲ್ಲ.

10.4. ಹಣಕಾಸು ವರ್ಷಕ್ಕೆ ಲೆಕ್ಕಪತ್ರ ಪದ್ಧತಿಗೆ ಸಂಬಂಧಿಸಿದಂತೆ, ಲೈಸೆನ್ಸುದಾರರು ಹಿಂದಿನ ಹಣಕಾಸು ವರ್ಷಕ್ಕೆ ಅನ್ವಯಿಸಿದ ಚಾರ್ಜು, ಅಥವಾ ಪಾಲು ಅಥವಾ ಹಂಚಿಕೆ ಆಧಾರಗಳನ್ನು ಬದಲಾಯಿಸಿದಾಗ, ಲೈಸೆನ್ಸುದಾರರು ಆಯೋಗವು ಕೋರಿದಲ್ಲಿ ಅನ್ವಯಿಸಲಾಗಿರುವಂತಹ ಆಧಾರಗಳ ಲೆಕ್ಕ ಪತ್ರ ವಿವರಣ ಪತ್ರಗಳನ್ನು ಸಿದ್ಧಪಡಿಸುವುದರ ಜೊತೆಗೆ ಆರ್ಥಿಕ ವರ್ಷದ ನಿಕಟ ಹಿಂದಿನ ವರ್ಷಕ್ಕೆ ಸಂಬಂಧಪಟ್ಟಂತೆ ಅನ್ವಯಿಸಲಾದ ಆಧಾರಗಳ ಲೆಕ್ಕಪತ್ರ ವಿವರಣಾ ಪತ್ರಗಳನ್ನು ಸಿದ್ಧಪಡಿಸತಕ್ಕದು.

10.5. ಆಯೋಗವು, ಷರತ್ತು 10.2 ರಂತೆ ಒಂದು ನಮೂನೆಯನ್ನು ಗೊತ್ತುಪಡಿಸುವವರೆಗೆ ಲೆಕ್ಕಪತ್ರ ವಿವರಣ ಪತ್ರಗಳನ್ನು ಕಂಪನಿಗಳ ಅಧಿನಿಯಮ, 1956ರ ಮೇರೆಗೆ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಸಿದ್ಧಪಡಿಸಬಹುದು.

10.6 ಯಾವುದೇ ಪ್ರತ್ಯೇಕ ವ್ಯವಹಾರದ ಯುಕ್ತ ಸಂಬಂಧದಲ್ಲಿರುವ ವೆಚ್ಚಗಳು ಅಥವಾ ಹೊಣೆಗಳಿಗೆ ಈ ಷರತ್ತು 7 ರಲ್ಲಿನ ಉಲ್ಲೇಖಗಳು, ಆ ಪ್ರತ್ಯೇಕ ವ್ಯವಹಾರಕ್ಕೆ ಮತ್ತು ಅದರ ಮೇಲಿನ ಹಿತಾಸಕ್ತಿಗೆ ಪ್ರಮುಖವಾಗಿ ಸಂಬಂಧಿಸಿದ ತೆರಿಗೆಯನ್ನು ಮತ್ತು ಬಂಡವಾಳ ಹೊಣೆಗಳನ್ನು ಒಳಗೊಂಡಿರುತ್ತವೆ ಎಂದು ಪರಿಭಾವಿಸತಕ್ಕದು.

10.7. ಷರತ್ತು 10.2ರ ಮೇರೆಗೆ ಪ್ರತಿ ಹಣಕಾಸು ವರ್ಷಕ್ಕೆ ಸಂಬಂಧಪಟ್ಟಂತೆ ಸಿದ್ಧಪಡಿಸಿದ ಲೆಕ್ಕಪತ್ರ ವಿವರಣ ಪಟ್ಟಿ ಮತ್ತು ಷರತ್ತು 10.2 (ಬಿ) (iii) ರಲ್ಲಿ ಉಲ್ಲೇಖಿಸಲಾದ ಪ್ರತಿ ಹಣಕಾಸು ವರ್ಷದ ಸಂಬಂಧದಲ್ಲಿ ಲೆಕ್ಕಪರಿಶೋಧಕರ ವರದಿಯನ್ನು ಅವುಗಳನ್ನು ಕೋರುವ ಯಾವನೇ ವ್ಯಕ್ತಿಗೆ ಅವನ್ನು ಪ್ರತಿ ಮಾಡಿಸುವ ಯುಕ್ತ ವೆಚ್ಚಕ್ಕೆ ಮೀರದ ಬೆಲೆಯಲ್ಲಿ ದೊರಕುವಂತೆ ಲೈಸೆನ್ಸುದಾರನು ಖಚಿತಪಡಿಸಿಕೊಳ್ಳತಕ್ಕದು.

11. **ಅನುಚಿತ ಆದ್ಯತೆಗಳಿಗೆ ನಿಷೇಧ.**

11.1 ಅಧಿನಿಯಮದ 62ನೆಯ ಪ್ರಕರಣಕ್ಕೆ ಒಳಪಟ್ಟು, ಶುಲ್ಕಗಳನ್ನು ನಿಗದಿಗೊಳಿಸುವಲ್ಲಿ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗಗಳಿಗೆ ಅನುಚಿತ ಆದ್ಯತೆ ಅಥವಾ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗಗಳ ವಿರುದ್ಧ ತಾರತಮ್ಯ ತೋರತಕ್ಕದ್ದಲ್ಲ.

11.2. ಅನುಚಿತ ಆದ್ಯತೆ ಅಥವಾ ಅಕಾರಣ ತಾರತಮ್ಯಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳನ್ನು ಆಯೋಗವು ಇತ್ಯರ್ಥಪಡಿಸತಕ್ಕದು.

12. **ಆಯೋಗಕ್ಕೆ ಮಾಹಿತಿ ಅವಕಾಶ**

12.1. ತನ್ನ ಉದ್ದೇಶಗಳಿಗಾಗಿ ಆಯೋಗವು ಕೋರುವ, ಲೈಸೆನ್ಸುದಾರನ ವ್ಯವಹಾರಕ್ಕೆ ಸಂಬಂಧಿಸಿದಂತಹ ಮಾಹಿತಿ, ದಸ್ತಾವೇಜುಗಳು ಮತ್ತು ವಿವರಗಳನ್ನು ಲೈಸೆನ್ಸುದಾರನು ಸಲ್ಲಿಸತಕ್ಕದ್ದು.

12.2. ವಿತರಣ ವ್ಯವಹಾರವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಕಾಲಕಾಲಕ್ಕೆ ಕ್ರಮ ಕೈಗೊಳ್ಳುವಂತೆ ಆಯೋಗವು ನಿರ್ದೇಶಿಸಬಹುದಾದ ರೀತಿಯಲ್ಲಿ ಲೈಸೆನ್ಸುದಾರನು ಅಧ್ಯಯನ ನಡೆಸತಕ್ಕದು.

12.3. ಲೈಸೆನ್ಸುದಾರನು, ಸಾಧ್ಯವಾದಷ್ಟು ಬೇಗ ಆದರೆ ವಿತರಣಾ ಪದ್ಧತಿಯ ಯಾವುದೇ ಭಾಗಕ್ಕೆ ಬಾಧಕವನ್ನುಂಟುಮಾಡುವಂತಹ ಯಾವುದೇ ಪ್ರಮುಖ ಘಟನೆಯ ದಿನಾಂಕದಿಂದ ಒಂದು ವಾರ ಕಳೆಯುವುದರೊಳಗಾಗಿ (ಕಳೆಯದಂತೆ) ಆಯೋಗಕ್ಕೆ ತಿಳಿಸತಕ್ಕದ್ದು ಮತ್ತು ಅಂತಹ ಪ್ರಮುಖ ಘಟನೆಯ ದಿನಾಂಕದಿಂದ ಒಂದು ತಿಂಗಳೊಳಗಾಗಿ ಘಟನೆ ಮತ್ತು ಅದರ ಕಾರಣಗಳಿಗೆ ಸಂಬಂಧಿಸಿದಂತೆ ಲೈಸೆನ್ಸುದಾರನಿಗೆ ತಿಳಿದಿರುವ ವಾಸ್ತವಾಂಶಗಳ ಬಗ್ಗೆ ಪೂರ್ಣ ವಿವರಗಳನ್ನು ನೀಡಿ ಒಂದು ವರದಿಯನ್ನು ಸಲ್ಲಿಸತಕ್ಕದ್ದು.

12.4. ಆಯೋಗವು ಅಧಿನಿಯಮದ 161ನೆಯ ಪ್ರಕರಣದಡಿಯಲ್ಲಿ ಬರುವ ವಿಷಯಗಳನ್ನು ಹೊರತುಪಡಿಸಿ, ಪ್ರಮುಖ ಘಟನೆಗೆ ಸಂಬಂಧಿಸಿದಂತೆ ಲೈಸೆನ್ಸುದಾರನ ವೆಚ್ಚದಲ್ಲಿ ಸ್ವತಂತ್ರವಾದ ವ್ಯಕ್ತಿಯೊಬ್ಬರಿಂದ ವರದಿ ಸಿದ್ಧಪಡಿಸಿ ಸಲ್ಲಿಸುವಂತೆ ಅಗತ್ಯಪಡಿಸಬಹುದಾಗಿದೆ. ಆಯೋಗವು ನಿರ್ದೇಶಿಸಬಹುದಾದಂತೆ ಪ್ರಮುಖ ಘಟನೆಯ ಬಗೆಗಿನ ವರದಿಯ ಪ್ರತಿಗಳನ್ನು ಆಯೋಗ ಮತ್ತು ಆ ಘಟನೆಯಲ್ಲಿ ಒಳಗೊಂಡ ಎಲ್ಲಾ ಪಕ್ಷಕಾರರಿಗೆ ನೀಡತಕ್ಕದ್ದು.

13. ಹೂಡಿಕೆಗಳು

13.1. ಲೈಸೆನ್ಸುದಾರನು ಮಿತವ್ಯಯ ಮತ್ತು ದಕ್ಷ ರೀತಿಯಲ್ಲಿ ಹಾಗೂ ಅನುಮೋದಿತ ಹೂಡಿಕೆ ಯೋಜನಾನುಸಾರ ಬಂಡವಾಳ ಹೂಡತಕ್ಕದ್ದು.

13.2. ಆಯೋಗ ಅನುಮೋದನೆಗಾಗಿ ಯೋಜನೆಯ ಅವಧಿಯಲ್ಲಿ ಕೈಗೊಳ್ಳಲಿರುವ ಬಂಡವಾಳ ಹೂಡಿಕೆ ಯೋಜನೆಯ ವಿವರಗಳೊಂದಿಗೆ 5 ವರ್ಷಗಳ ರೋಲಿಂಗ್ ಯೋಜನೆಯನ್ನು ಲೈಸೆನ್ಸುದಾರನು ಸಲ್ಲಿಸಬೇಕೆಂದು ಆಯೋಗವು ಅಗತ್ಯಪಡಿಸಬಹುದಾಗಿದೆ.

ಅಂತಹ ಪ್ರಕರಣದಲ್ಲಿ ಲೈಸೆನ್ಸುದಾರನು :

ಎ) ಆರ್ಥಿಕ ವರ್ಷದಲ್ಲಿ ಕೈಗೆತ್ತಿಗೊಳ್ಳಲಿರುವ ಬಂಡವಾಳ ಹೂಡಿಕೆ ಯೋಜನೆಗಳ ವಿವರಗಳೊಂದಿಗೆ ವಾರ್ಷಿಕ ಹೂಡಿಕೆ ಯೋಜನೆ ಮತ್ತು

ಬಿ) ಆಯೋಗವು ಅನುಮೋದಿಸಬಹುದಾದಂತೆ ವಾಸ್ತವ ಅನುಷ್ಠಾನದ ಹೋಲಿಕೆಯ ಯೋಜನೆಯೊಂದಿಗೆ ಹಿಂದಿನ ಆರ್ಥಿಕ ವರ್ಷದ ವಾರ್ಷಿಕ ಬಂಡವಾಳ ಹೂಡಿಕೆ ಯೋಜನೆಯಲ್ಲಿನ ಅನುಷ್ಠಾನದಲ್ಲಿ ಆಗಿರುವ ಪ್ರಗತಿಯನ್ನು ತಿಳಿಸತಕ್ಕದ್ದು.

13.3. ಆಯೋಗವು, ಷರತ್ತು 13.2 ಅನ್ನು ಲೈಸೆನ್ಸುದಾರನು ಪಾಲಿಸಬೇಕೆಂದು ಅಗತ್ಯಪಡಿಸದಿದ್ದರೂ, ಲೈಸೆನ್ಸುದಾರನು ಶುಲ್ಕಗಳಿಂದ ನಿರೀಕ್ಷಿತ ಆದಾಯದೊಂದಿಗೆ ಕೈಗೆತ್ತಿಕೊಳ್ಳಲಿರುವ ಬಂಡವಾಳ ಹೂಡಿಕೆ ಯೋಜನೆಗಳ ವಿವರಗಳೊಂದಿಗೆ ಪ್ರತಿ ಆರ್ಥಿಕ ವರ್ಷಕ್ಕಾಗಿ ವಾರ್ಷಿಕ ಹೂಡಿಕಾ ಯೋಜನೆಯನ್ನು ಸಲ್ಲಿಸತಕ್ಕದ್ದು.

13.4. ಲೈಸೆನ್ಸುದಾರನು, ಚಾಲ್ತಿಯಲ್ಲಿರುವ ನಿಯಮಗಳು ಮತ್ತು ವಿನಿಯಮಗಳಂತೆ ಪಾರದರ್ಶಕ ಟೆಂಡರು ಕರೆಯುವ ವ್ಯವಹಾರಗಳನುಸಾರ ಉಪಕರಣಗಳು, ವಸ್ತುಗಳು ಮತ್ತು/ಅಥವಾ ಸೇವೆಗಳನ್ನು ಪಡೆಯುವುದಕ್ಕಾಗಿ ಟೆಂಡರುಗಳನ್ನು ಆಹ್ವಾನಿಸಿ ಇತ್ಯರ್ಥಪಡಿಸತಕ್ಕದ್ದು.

13.5. ಆಯೋಗವು ಕಾಲಕಾಲಕ್ಕೆ ನೀಡಬಹುದಾದ ಹೂಡಿಕೆಗಳು ಮತ್ತು ಬಂಡವಾಳ ವೆಚ್ಚಗಳ ಅನುಮೋದನೆಗೆ ಸಂಬಂಧಿಸಿದ ನಿರ್ದೇಶನಗಳನ್ನು ಲೈಸೆನ್ಸುದಾರನು ಪಾಲಿಸತಕ್ಕದ್ದು.

13.6. ಲೈಸೆನ್ಸುದಾರನ ಅಧಿಕೃತ ವ್ಯವಹಾರ ಅಥವಾ ವಿದ್ಯುಚ್ಛಕ್ತಿ ವಲಯದ ಹಿತಾಸಕ್ತಿ ದೃಷ್ಟಿಯಿಂದ ಅಗತ್ಯವಿರುವ ಯಾವುದೇ ಮುಂಗಾಣದ ಹೂಡಿಕೆಗಳನ್ನು ನಿಭಾಯಿಸಲು, ಲೈಸೆನ್ಸುದಾರನು ಪ್ರತಿ ಹೂಡಿಕೆ ಯೋಜನೆಯ ಅಂಶ/ಕಾಮಗಾರಿಯ ಸಂಬಂಧದಲ್ಲಿ ಸಲಾಸರಿ ಹೂಡಿಕೆ ಯೋಜನೆಯ ಶೇಕಡಾ 10ರ ಮಿತಿಯವರೆಗೆ ಮತ್ತು ಅನುಮೋದಿತ ಮೊತ್ತದ ಶೇ 25ರಷ್ಟನ್ನು, ಪುನರ್ ಹಂಚಿಕೆ ಮಾಡಿ, ಹೂಡಿಕೆ ಯೋಜನೆಯನ್ನು ಹೊಂದಾಣಿಕೆ ಮಾಡುವ ಅರ್ಹತೆ ಹೊಂದಬಹುದಾಗಿದೆ. ಆರ್ಥಿಕ ವರ್ಷದಲ್ಲಿ ಅನುಮೋದಿತ ಹೂಡಿಕೆ ಯೋಜನೆಗಳನ್ನು ಮೀರುವ ಮುಂಗಾಣದ ಹೂಡಿಕೆಗಳು/ಬದ್ಧತೆಗಳು ಅಗತ್ಯವಿರುವ ಸಂದರ್ಭಗಳಲ್ಲಿ, ಲೈಸೆನ್ಸುದಾರನು ಆಯೋಗದ ಅನುಮೋದನೆಯೊಂದಿಗೆ ಮಾತ್ರ ಅಂತಹ ಹೆಚ್ಚುವರಿ ಹೂಡಿಕೆಗಳು/ಬದ್ಧತೆಗಳನ್ನು ನಿರ್ವಹಿಸುವ ಹಕ್ಕುಳ್ಳವನಾಗುತ್ತಾನೆ.

14. ಆಸ್ತಿಗಳ ವಿಲೆ :

14.1 ಉದ್ದೇಶಿತ ವಿಲೆಯ ಸಮಯದಲ್ಲಿ, ಅಂದಾಜು ಪುಸ್ತಕದಲ್ಲಿ ಮೌಲ್ಯವು 25 ಲಕ್ಷ ರೂ. ಗಳಿಗೆ ಮೀರಿದ ಯಾವುದೇ ಭೂಮಿಯನ್ನು, ಕಟ್ಟಡವನ್ನು ಅಥವಾ ಆಸ್ತಿಯನ್ನು ಒಂದೇ ವ್ಯವಹಾರದಲ್ಲಿ ಲೈಸೆನ್ಸುದಾರನು ಈ 14ನೇ ಷರತ್ತನ್ನು ಪಾಲಿಸದೆ ವಿಲೇ ಮಾಡತಕ್ಕುದಲ್ಲ ಅಥವಾ ಆ ಪ್ರದೇಶದ ನಿರ್ವಹಣಾ ನಿಯಂತ್ರಣವನ್ನು ತಾನಾಗಿಯೇ ಬಿಟ್ಟುಕೊಡತಕ್ಕುದಲ್ಲ. ಈ 14ನೇ ಷರತ್ತಿನ ಉಪಬಂಧವನ್ನು ತಪ್ಪಿಸಿಕೊಳ್ಳುವ ದೃಷ್ಟಿಯಿಂದ, ಲೈಸೆನ್ಸುದಾರನು ಆಸ್ತಿಗಳನ್ನು ಅಥವಾ ಅದರ ಬೆಲೆಯನ್ನು ವಿಭಜಿಸತಕ್ಕುದಲ್ಲ. ಪಾಲು ಮಾಡತಕ್ಕುದಲ್ಲ ಅಥವಾ ಇಬ್ಭಾಗ ಮಾಡತಕ್ಕುದಲ್ಲ.

14.2 ಷರತ್ತು 14.1ರಲ್ಲಿ ಒಳಗೊಂಡಿರುವ ಯಾವುದೇ ಸ್ವತ್ತನ್ನು ವಿಲೇ ಮಾಡುವ ಅಥವಾ ಅದರ ಮೇಲಿನ ನಿರ್ವಹಣಾ ನಿಯಂತ್ರಣವನ್ನು ಬಿಟ್ಟುಕೊಡುವ ತನ್ನ ಉದ್ದೇಶವನ್ನು, ಸದರಿ ಉದ್ದೇಶಿತ ವಿಲೆಯ ಸಮಯದಲ್ಲಿ, ಅಂದಾಜು ಪುಸ್ತಕದಲ್ಲಿ ಅದರ ಮೌಲ್ಯವು 25 ಲಕ್ಷ ರೂ. ಗಳನ್ನು ಮೀರಿದ್ದರೆ, ಲೈಸೆನ್ಸುದಾರನು, ಆಯೋಗಕ್ಕೆ ಒಂದು ತಿಂಗಳಿಗೆ ಕಡಿಮೆ ಇಲ್ಲದಂತೆ ಮುಂಚಿತವಾಗಿಯೇ ಲಿಖಿತ ನೋಟೀಸನ್ನು ನೀಡತಕ್ಕುದು. ಆಯೋಗವು ಕೋರುವಂಥ ಮತ್ತಷ್ಟು ಮಾಹಿತಿಯನ್ನು ಲೈಸೆನ್ಸುದಾರನು ಒದಗಿಸುವವರೆಗೆ ನೋಟೀಸನ್ನು ನೀಡಲಾಗಿದೆ ಎಂಬುದಾಗಿ ಪರಿಭಾವಿಸತಕ್ಕುದಲ್ಲ.

14.3 ಲೈಸೆನ್ಸುದಾರನು, 14.2ನೇ ಷರತ್ತಿನಂತೆ ಕೊಟ್ಟಿರುವ ಯಾವುದೇ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದಂತೆ ಯಾವುದೇ ಸ್ವತ್ತನ್ನು ವಿಲೇ ಮಾಡುವುದಾದರೆ ಅಥವಾ ಅದರ ಮೇಲಿನ ನಿರ್ವಹಣಾ ನಿಯಂತ್ರಣಗಳನ್ನು ಬಿಡುವುದಾದರೆ:

ಎ) ಆಯೋಗವು ವಿಧಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಆಯೋಗವು ಅಂಥ ವಿಲೆಗೆ ಅಥವಾ ನಿರ್ವಹಣಾ ನಿಯಂತ್ರಣವನ್ನು ಬಿಟ್ಟುಕೊಡುವುದಕ್ಕೆ ಲಿಖಿತದಲ್ಲಿ ತನ್ನ ಸಮ್ಮತಿಯನ್ನು ಸ್ಥಿರೀಕರಿಸಿದ್ದರೆ; ಅಥವಾ

ಬಿ) ಷರತ್ತು 14.2ರಲ್ಲಿ ಉಲ್ಲೇಖಿಸಲಾದ ನೋಟೀಸಿನ ಅವಧಿಯೊಳಗೆ ಅಂಥ ವಿಲೆಗೆ ಅಥವಾ ನಿರ್ವಹಣಾ ನಿಯಂತ್ರಣವನ್ನು ಬಿಟ್ಟುಕೊಡುವುದಕ್ಕೆ ಯಾವುದೇ ಆಕ್ಷೇಪಣೆಯನ್ನು ಆಯೋಗವು ಲಿಖಿತದಲ್ಲಿ ಲೈಸೆನ್ಸುದಾರನಿಗೆ ತಿಳಿಸಿರದಿದ್ದರೆ.

– ಪಾರದರ್ಶಕ ಹಾಗೂ ಸ್ಪರ್ಧಾತ್ಮಕ ಹರಾಜಿನ ಮೂಲಕ ಮಾತ್ರ ಹಾಗೆ ಮಾಡಬಹುದು.

14.4 ಲೈಸೆನ್ಸುದಾರನು :–

ಆಯೋಗವು ಈ 14ನೇ ಷರತ್ತಿನ ಉದ್ದೇಶಗಳಿಗಾಗಿ,–

ಎ) ನಿರ್ದಿಷ್ಟ ವಿವರಣೆಯ ವ್ಯವಹಾರಗಳಿಗೆ ಮತ್ತು : ಅಥವಾ

ಬಿ) ಒಂದು ನಿರ್ದಿಷ್ಟ ವಿವರಣೆಯ ಆಸ್ತಿಗಳ ವಿಲೆಗಾಗಿ ಅಥವಾ ನಿರ್ವಹಣಾ ನಿಯಂತ್ರಣವನ್ನು ಬಿಟ್ಟುಕೊಡುವುದಕ್ಕೆ ಸಾಮಾನ್ಯ ಸಮ್ಮತಿಯನ್ನು (ಷರತ್ತುಗಳಿಗೆ ಒಳಪಟ್ಟರಲಿ ಅಥವಾ ಇಲ್ಲದಿರಲಿ) ಒಳಗೊಂಡಿರುವ ನಿರ್ದೇಶನಗಳನ್ನು ನೀಡಿದ್ದರೆ ಯಾವುದೇ ಆಸ್ತಿಯನ್ನು ವಿಲೆ ಮಾಡಬಹುದು ಅಥವಾ ಅದರ ಮೇಲಿನ ನಿರ್ವಹಣಾ ನಿಯಂತ್ರಣವನ್ನು ಬಿಟ್ಟುಕೊಡಬಹುದು.

ಪರಂತು, ಅಂಥ ನಿರ್ದೇಶನಗಳು ಯಾವ ವಿವರಣೆಗೆ ಅನ್ವಯವಾಗುತ್ತವೆ, ವ್ಯವಹಾರವು ಅಥವಾ ಆಸ್ತಿಗಳು ಅಂಥ ವಿವರಣೆಯವುಗಳಾಗಿರಬೇಕು ಮತ್ತು ಸಮ್ಮತಿಯು ಯಾವ ಷರತ್ತುಗಳಿಗೆ ಒಳಪಟ್ಟಿರುತ್ತದೆಯೋ, ವಿಲೆಯು ಅಥವಾ ನಿರ್ವಹಣಾ ನಿಯಂತ್ರಣವನ್ನು ಬಿಟ್ಟುಕೊಡುವುದು ಆ ಷರತ್ತುಗಳಿಗೆ ಅನುಸಾರವಾಗಿರಬೇಕು.

14.5 ಮೇಲೆ ಏನೇ ಹೇಳಿದ್ದರೂ ಸಹ ಲೈಸೆನ್ಸುದಾರನು ಸ್ವತ್ತುಗಳನ್ನು ಋಣ ವಿಮೋಚನ ನಿಮಿತ್ತ ಹಣಕಾಸು ನೀಡಿಕೆಗಾಗಿ, ಮಾರಾಟಕ್ಕಾಗಿ ಮತ್ತು ಮರು ಗುತ್ತಿಗೆಗಾಗಿ ವಸೂಲಾಗಬೇಕಾದವುಗಳಿಗೆ ಭದ್ರತೆಗಾಗಿ ಮಾಡಿಕೊಳ್ಳುವ ಆನುಷಂಗಿಕ ಒಪ್ಪಂದಗಳೂ ಸೇರಿದಂತೆ ಸುಸಂಗತ ಒಪ್ಪಂದಗಳನ್ನು ಮಾಡಿಕೊಂಡ ಕೂಡಲೇ ಅಂತಹ ವ್ಯವಸ್ಥೆಗಳ ಬಗ್ಗೆ ಆಯೋಗಕ್ಕೆ ತಿಳಿಸಬೇಕೆಂಬ ಷರತ್ತಿಗೊಳಪಟ್ಟು, ತನ್ನ ಹೂಡಿಕೆ ಅಗತ್ಯಗಳಿಗೆ ಹಣಕಾಸು ದೊರಕಿಸಿಕೊಳ್ಳುವ ಸಾಧನವಾಗಿ ಆಸ್ತಿಗಳನ್ನು ಬಳಸಿಕೊಳ್ಳುವುದಕ್ಕೆ ಹಕ್ಕುಳ್ಳವನಾಗಿರತಕ್ಕುದು.

15. **ಲೈಸೆನ್ಸು ಶುಲ್ಕಗಳ ಸಂದಾಯ**

15.1 ಲೈಸೆನ್ಸು ಚಾಲ್ತಿಯಲ್ಲಿರುವ ಅವಧಿಯಲ್ಲಿ ಪ್ರತಿ ವರ್ಷದ ಏಪ್ರಿಲ್ 30ರೊಳಗೆ ಅಥವಾ ಆಯೋಗವು ಅನುಮೋದಿಸಬಹುದಾದಂತಹ ಮತ್ತಷ್ಟು ಅವಧಿಯೊಳಗಾಗಿ ಲೈಸೆನ್ಸುದಾರನು ಆಯೋಗಕ್ಕೆ ವಾರ್ಷಿಕ ಶುಲ್ಕವನ್ನು ಸಂದಾಯ ಮಾಡತಕ್ಕುದು.

15.2. ಷರತ್ತು 15.1 ರಂತರೆ ಬಾಕಿಯಿರುವ ಯಾವುದೇ ಶುಲ್ಕವನ್ನು ಗಡುವಿನ ದಿನಾಂಕದೊಳಗೆ ಆಯೋಗಕ್ಕೆ ಸಂದಾಯ ಮಾಡಲು ಲೈಸೆನ್ಸುದಾರನು ವಿಫಲನಾಗಿದ್ದಲ್ಲಿ, ಕಟ್ಟ ಬೇಕಾದ ಮೊತ್ತವು ಬಾಕಿಯಾದ ಮಾರನೆಯ ದಿನದಿಂದ ಮತ್ತು ಆಯೋಗವು ಮೊತ್ತವನ್ನು ಸ್ವೀಕರಿಸುವ ದಿನದ ಕೊನೆಯವರೆಗಿನ ಅವಧಿಗೆ ಪ್ರತಿ ತಿಂಗಳಿಗೆ ಶೇಕಡಾ ಒಂದರ ದರದಲ್ಲಿ ಬಾಕಿಯಿರುವ ಮೊತ್ತಕ್ಕೆ ಸರಳ ಬಡ್ಡಿಯನ್ನು ಆಯೋಗಕ್ಕೆ ಲೈಸೆನ್ಸುದಾರನು ಸಂದಾಯ ಮಾಡಲು ಬಾಧ್ಯನಾಗತಕ್ಕದ್ದು.

15.3 ಷರತ್ತು 15.1 ರಂತೆ ಯಾವುದೇ ಶುಲ್ಕ ಅಥವಾ ಷರತ್ತು 15.2 ರಂತೆ ಯಾವುದೇ ಬಡ್ಡಿಯನ್ನು ಸಂದಾಯ ಮಾಡಲು ಲೈಸೆನ್ಸುದಾರನು ವಿಫಲನಾದಲ್ಲಿ ಅಧಿನಿಯಮದ 19ನೆಯ ಪ್ರಕರಣ ಮತ್ತು ಷರತ್ತು 19ರನುಸಾರ ಆಯೋಗವು ಈ ಲೈಸೆನ್ಸನ್ನು ರದ್ದುಮಾಡಬಹುದು.

15.4. ಲೈಸೆನ್ಸುದಾರನು ಷರತ್ತು 27ರ ಅನುಸಾರವಾಗಿ ಸರಾಸರಿ ಆದಾಯವನ್ನು ನಿರ್ಧರಿಸಲಾದಂತೆ ಷರತ್ತು 15ರ ಮೇರೆಗೆ ಸಂದಾಯ ಮಾಡಲಾದ ಶುಲ್ಕವನ್ನು ಲೆಕ್ಕಕ್ಕೆ ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕುದು, ಆದರೆ ಈ 15.2 ನೆಯ ಷರತ್ತಿನ ಪ್ರಕಾರ ಸಂದಾಯ ಮಾಡಿದ ಬಡ್ಡಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

16. ವಿವಾದ ನಿರ್ಣಯ :

ಆಯೋಗವು, ಲೈಸೆನ್ಸುದಾರರು ಮತ್ತು ಉತ್ಪಾದನಾ ಕಂಪನಿಗಳ ನಡುವಿನ ವಿವಾದಗಳನ್ನು ಇತ್ಯರ್ಥಗೊಳಿಸಲು ಮಧ್ಯಸ್ಥಿಕೆದಾರನಾಗಿ ಕಾರ್ಯನಿರ್ವಹಿಸತಕ್ಕದ್ದು ಮತ್ತು ಯಾವುದೇ ವಿವಾದಗಳನ್ನು ಮಧ್ಯಸ್ಥಿಕೆಗೆ ವಹಿಸಬಹುದಾಗಿದೆ.

17. ಗುಣಮಟ್ಟಗಳು ಮತ್ತು ವ್ಯವಹರಣೆಗಳು :

ಆಯೋಗವು ಪ್ರಸ್ತಾಪಿಸಿದ ಅಥವಾ ಅಧಿಸೂಚಿಸಿದ ಯಾವುದೇ ಗುಣಮಟ್ಟಗಳು, ಸಂಹಿತೆಗಳು, ವ್ಯವಹರಣೆಗಳನ್ನು ಅಭಿವೃದ್ಧಿಪಡಿಸಲು, ಬಿಡುಗಡೆಗೊಳಿಸಲು ಮತ್ತು ಪರಿಶೀಲಿಸಲು ಆಯೋಗವು ಅಗತ್ಯ ಪಡಿಸುವವರೆಗೆ, ಆಯೋಗ ಈ ಕಾರ್ಯಗಳಲ್ಲಿ ಲೈಸೆನ್ಸುದಾರನು ಭಾಗವಹಿಸಿ ಮತ್ತು ನೆರವು ನೀಡುವುದು ಅಗತ್ಯವಾಗಿದೆ.

18. ಲೈಸೆನ್ಸಿನ ಷರತ್ತುಗಳ ಉಲ್ಲಂಘನೆಗಾಗಿ ದಂಡ :

ಲೈಸೆನ್ಸಿನ ಈ ಷರತ್ತುಗಳ ಯಾವುದೇ ಒಂದು ಅಥವಾ ಅದಕ್ಕಿಂತ ಹೆಚ್ಚು ಉಪಬಂಧಗಳನ್ನು ಉಲ್ಲಂಘಿಸಿದ ಸೂಕ್ತ ಪ್ರಕರಣಗಳಲ್ಲಿ, ಅಧಿನಿಯಮದ 142 ಮತ್ತು 146ನೆಯ ಪ್ರಕರಣಗಳಂತೆ ಲೈಸೆನ್ಸುದಾರನು ದಂಡ ವಿಧಿಸುವ ಕ್ರಮಕ್ಕೆ ಬಾಧ್ಯನಾಗುತ್ತಾನೆ.

19. ನಿಬಂಧನೆಗಳ ರದ್ದತಿ :

ಆಯೋಗವು, ಅಧಿನಿಯಮದ 19ನೆಯ ಪ್ರಕರಣವು ಅಗತ್ಯ ಪಡಿಸುವುದನ್ನು ಪಾಲಿಸಿದ ನಂತರ ಯಾವುದೇ ಸಮಯದಲ್ಲಿ ಲೈಸೆನ್ಸುದಾರನಿಗೆ ಲೈಸೆನ್ಸು ರದ್ದತಿಯ ಬಗ್ಗೆ 3 ತಿಂಗಳ ಸೂಚನೆಯನ್ನು ಲಿಖಿತವಾಗಿ ನೀಡಬಹುದಾಗಿದೆ. ಅಧಿನಿಯಮದ 19ನೇ ಪ್ರಕರಣದ (1) ಉಪಪ್ರಕರಣದ (ಬಿ) ಖಂಡಿಕೆಯ ಉದ್ದೇಶಕ್ಕಾಗಿ ಈ ಲೈಸೆನ್ಸಿನ ಷರತ್ತುಗಳಾದ 3 ರಿಂದ 8, 11 ರಿಂದ 15, 20 ರಿಂದ 24, 26.1, 27 ಮತ್ತು 28ರಲ್ಲಿ ಯಾವುದೇ ಒಂದರ ಉಲ್ಲಂಘನೆಯಾದರೂ ಲೈಸೆನ್ಸಿನ ರದ್ದತಿಗೆ ಬಾಧ್ಯವಾಗುವುದೆಂದು ಈ ಮೂಲಕ ಘೋಷಿಸಲಾಗುತ್ತದೆ.

## ಭಾಗ – III

## ತಾಂತ್ರಿಕ ಷರತ್ತುಗಳು

20. ಹೊರೆಯ ಮುನ್ನೋಟ

ಲೈಸೆನ್ಸುದಾರನು ವಾರ್ಷಿಕ ಆಧಾರದ ಮೇಲೆ :

ಎ) ಮುಂದಿನ ಪ್ರತಿ ಹತ್ತು ವರ್ಷಗಳಲ್ಲಿ ಸರಬರಾಜು ಪ್ರದೇಶದೊಳಗೆ ವಿದ್ಯುಚ್ಛಕ್ತಿಯ ಬೇಡಿಕೆಯ ಮುನ್ನೋಟ :

ಬಿ) ಆಯೋಗವು ಕಾಲಕಾಲಕ್ಕೆ ಬಿಡುಗಡೆಗೊಳಿಸುವ ಮಾರ್ಗಸೂಚಿಗಳನುಸಾರ ಅಂತಹ ಮುನ್ನೋಟಗಳನ್ನು ರಚಿಸಿ ಆಯೋಗಕ್ಕೆ ಸಲ್ಲಿಸಬೇಕು, ಮತ್ತು

ಸಿ) ಕರ್ನಾಟಕ ರಾಜ್ಯಕ್ಕಾಗಿ ವಿದ್ಯುಚ್ಛಕ್ತಿ ಬೇಡಿಕೆಯ ಮುನ್ನೋಟ ಸಿದ್ಧ ಪಡಿಸುವಲ್ಲಿ ಎಸ್‌ಟಿಯು ನೊಂದಿಗೆ ಸಹಕರಿಸತಕ್ಕದ್ದು,

21. ವಿದ್ಯುತ್ ಪಡೆಯುವ ವಿಧಾನಗಳು:

21.1. ಆಯೋಗವು ಕಾಲಕಾಲಕ್ಕೆ ವಿದ್ಯುತ್ ಪಡೆಯುವುದಕ್ಕೆ ಕಾರ್ಯ ವಿಧಾನ, ವಿದ್ಯುತ್ ಹೊರೆಯ ಮುನ್ನೋಟ ಮತ್ತು ವಿದ್ಯುತ್ ಪಡೆಯುವ ಯೋಜನೆಗೆ ಸಂಬಂಧಿಸಿದ ಬಗ್ಗೆ ನೀಡಿದ ಸಂಗ್ರಹಣಾ ಮಾರ್ಗಸೂಚಿಗಳನ್ನು ಅನುಸರಿಸಿದ ನಂತರ ಆಯೋಗವು ಅನುಮೋದಿಸಿದಂತೆ ಪಾರದರ್ಶಕ ವಿಧಾನಕ್ಕನುಗುಣವಾಗಿ ಲೈಸೆನ್ಸುದಾರನು ಎಲ್ಲಾ ಸಂದರ್ಭಗಳಲ್ಲಿಯೂ ಮಿತವ್ಯಯ ಮತ್ತು ದಕ್ಷ ರೀತಿಯಲ್ಲಿ ವಿದ್ಯುತ್ ಸಾಮರ್ಥ್ಯವನ್ನು ಮತ್ತು/ಅಥವಾ ವಿದ್ಯುತ್ತನ್ನು ಪಡೆಯತಕ್ಕದ್ದು.

21.2. ಲೈಸೆನ್ಸುದಾರನು ಷರತ್ತು 21.1ರ ನಿಬಂಧನೆಗಳಂತೆ ಆರು ತಿಂಗಳಿಗಿಂತ ಕಡಿಮೆ ಅವಧಿಯ ಖರೀದಿ ಪ್ರಕರಣಗಳನ್ನು ಹೊರತು ಪಡಿಸಿ, ಆಯೋಗದ ಪ್ರಾಧಿಕೃತ ಮಂಜೂರಾತಿಯಿಲ್ಲದೆ ವಿದ್ಯುತ್ ಸಾಮರ್ಥ್ಯ ಮತ್ತು/ಅಥವಾ ವಿದ್ಯುತ್ತನ್ನು ಖರೀದಿಸತಕ್ಕದ್ದಲ್ಲ.

21.3 ಲೈಸೆನ್ಸುದಾರನು 21.2 ನೆಯ ಷರತ್ತಿನಂತೆ ಪ್ರಾಧಿಕೃತವು ಅಗತ್ಯವಾಗಿದ್ದಲ್ಲಿ:

ಎ) 2.1 (ಎ) ಷರತ್ತಿನನುಸಾರ ಲೈಸೆನ್ಸುದಾರನ ಹೊಣೆಯ ಸೇವೆಯನ್ನು ಈಡೇರಿಸಲು ಅಗತ್ಯ ವಿದ್ಯುತ್ ಸಂಗ್ರಹಣಾ ಸಾಮರ್ಥ್ಯ ಮತ್ತು/ಅಥವಾ ಇಂಧನ ಅವಶ್ಯವಾಗಿದೆಯೆಂದೂ, ಮತ್ತು ಅನುಮೋದಿತ ಹೊರೆಯ ಮುನ್ನೋಟ ಮತ್ತು ವಿದ್ಯುತ್ ಖರೀದಿ ಯೋಜನೆಗೆ ಸಂಗತವಾಗಿರಬೇಕು.

ಬಿ) ಹೆಚ್ಚುವರಿ ವಿದ್ಯುತ್ ಸಂಗ್ರಹಣಾ ಸಾಮರ್ಥ್ಯವನ್ನು ಮತ್ತು/ಅಥವಾ ಇಂಧನವನ್ನು ಖರೀದಿಸುವ ಪ್ರಸ್ತಾವಗಳಿಗೆ ಪರ್ಯಾಯವಾಗಿ ವಾಣಿಜ್ಯ ದೃಷ್ಟಿಯಿಂದ ಕಾರ್ಯಸಾಧ್ಯವಾದ ಆರ್ಥಿಕ, ತಾಂತ್ರಿಕ ಪದ್ಧತಿಯನ್ನು ಮತ್ತು ಪರಿಸರ ಸಂರಕ್ಷಣೆ ಅಂಶಗಳನ್ನು (ಬೇಡಿಕೆ ಮಟ್ಟವನ್ನು ಕಡಿಮೆ ಮಾಡಲು ಮಾಡಿರುವ ವ್ಯವಸ್ಥೆ ಸೇರಿದಂತೆ) ಪರಿಶೀಲಿಸಿದ್ದೇನೆಂದು ಮತ್ತು ಅಂಥ ಪರಿಶೀಲನೆಯನ್ನು ಆಯೋಗವು ಅನುಮೋದಿಸಿದ ರೀತಿಯಲ್ಲಿ ಕೈಗೊಳ್ಳಲಾಗಿದೆ ಎಂದು ಆಯೋಗಕ್ಕೆ ಮನವರಿಕೆಯಾಗುವಂತೆ ನಿರೂಪಿಸಿದರೆ ಮಂಜೂರು ಮಾಡತಕ್ಕದ್ದು. ಅಂತಹ ಅರ್ಜಿ ಸ್ವೀಕರಿಸಿದ ದಿನಾಂಕದಿಂದ 120 ದಿನಗಳೊಳಗೆ ಅದನ್ನು ಆಯೋಗವು ವಿಲೇವಾರಿ ಮಾಡತಕ್ಕದ್ದು.

21.4. ಲೈಸೆನ್ಸುದಾರರು ಎಲ್ಲಾ ಸಂದರ್ಭಗಳಲ್ಲಿ, ವಿದ್ಯುತ್ ಸಾಮರ್ಥ್ಯ ಮತ್ತು/ಅಥವಾ ಇಂಧನವನ್ನು ಈ ಮುಂದಿನ ದೃಷ್ಟಿಯಲ್ಲಿ ಖರೀದಿಸತಕ್ಕದ್ದು.

ಎ) ರಾಜ್ಯ ಗ್ರಿಡ್ ಸಂಹಿತೆಯೊಂದಿಗೆ ಪಾಲನೆಯಾಗಿರುವುದು.

ಬಿ) ವಿದ್ಯುತ್ ಸಾಮರ್ಥ್ಯ/ವಿದ್ಯುತ್ ಖರೀದಿಗೆ ಒಡಂಬಡಿಕೆಯ ವಿವರಗಳನ್ನು ಆಯೋಗಕ್ಕೆ ಅಂತಹ ಒಡಂಬಡಿಕೆಗಳು ಇತ್ಯರ್ಥವಾದ ಒಂದು ತಿಂಗಳೊಳಗೆ ಸಲ್ಲಿಸಬೇಕು.

22. ರಾಜ್ಯ ಗ್ರಿಡ್ ಸಂಹಿತೆಯ ಪಾಲನೆ :

22.1 ಲೈಸೆನ್ಸುದಾರನು ತನಗೆ ಅನ್ವಯವಾಗುವವರೆಗೆ ರಾಜ್ಯ ಗ್ರಿಡ್ ಸಂಹಿತೆಯ ಉಪಬಂಧಗಳೊಂದಿಗೆ ಪಾಲಿಸತಕ್ಕದ್ದು.

22.2 ಆಯೋಗವು ಸಕಾರಣದ ನೆಲೆಯಲ್ಲಿ ಮತ್ತು ಯಾವುದೇ ರೀತಿಯಲ್ಲಿ ಬಾಧಿತರಾದ ವಿದ್ಯುತ್ ಉತ್ಪಾದನಾ ಕಂಪನಿಗಳು, ವ್ಯಾಪಾರದಾರರು ಮತ್ತು ಲೈಸೆನ್ಸುದಾರರೊಂದಿಗೆ ಸಮಾಲೋಚಿಸಿದ ನಂತರ, ಆ ನಿರ್ದೇಶನಗಳಲ್ಲಿ ಕೋರಿದ ಅಂತಹ ಭಾಗಗಳಿಗೆ ಸಂಬಂಧಪಟ್ಟಂತೆ ಮತ್ತು ನಿರ್ದಿಷ್ಟಪಡಿಸಬಹುದಾದರಷ್ಟರ ಮಟ್ಟಿಗೆ 22.1 ನೆಯ ಷರತ್ತಿನ ಮೇರೆಗಿನ ಹೊಣೆಯನ್ನು ಮುಕ್ತಗೊಳಿಸಿರುವ ಆದೇಶಗಳನ್ನು ಹೊರಡಿಸಬಹುದಾಗಿದೆ.

23. ವಿತರಣೆ ಸಂಹಿತೆಯ ಪಾಲನೆ :

ಲೈಸೆನ್ಸುದಾರನು, ಆಯೋಗವು ನಿರ್ದಿಷ್ಟಪಡಿಸಿದ ವಿತರಣ ಸಂಹಿತೆಯನ್ನು ಪಾಲಿಸಿ ಅನುಷ್ಠಾನಗೊಳಿಸತಕ್ಕದ್ದು; ಪರಂತು ಆಯೋಗವು ಲೈಸೆನ್ಸುದಾರನ ವಿತರಣಾ ಪದ್ಧತಿಯ ಅಂತಹ ಭಾಗಗಳ ಸಂಬಂಧದಲ್ಲಿ ವಿತರಣ ಸಂಹಿತೆಯಂತೆ ಲೈಸೆನ್ಸುದಾರನ ಹೊಣೆಗಾರಿಕೆಯಿಂದ ಮತ್ತು ಆಯೋಗವು ಸೂಚಿಸುವಷ್ಟರ ಮಟ್ಟಿಗೆ ತಾನಾಗಿಯೇ ಅಥವಾ ಅರ್ಜಿಯ ಮೇಲೆ ಮುಕ್ತಗೊಳಿಸುವ ಆದೇಶಗಳನ್ನು ಹೊರಡಿಸಬಹುದು.

24. ಗುಣಮಟ್ಟಗಳ ಪಾಲನೆ

24.1 ಲೈಸೆನ್ಸುದಾರನು, ಅಧಿನಿಯಮ, 2003ರ 23ನೆಯ ಪ್ರಕರಣದಂತೆ ಆಯೋಗವು ನಿರ್ದಿಷ್ಟಪಡಿಸಬಹುದಾದಂತೆ ಸರಬರಾಜನ್ನು ನಿಯಂತ್ರಿಸಲು ಸಮ್ಮತಿಸಿರುವುದನ್ನು ಹೊರತುಪಡಿಸಿ, ಆಯೋಗವು ನಿರ್ದಿಷ್ಟಪಡಿಸಿದ ಗುಣಮಟ್ಟಗಳಲ್ಲಿ ಪರಿಭಾಷಿಸಿರುವಂತೆ ಲೈಸೆನ್ಸುದಾರರ ವಿತರಣಾ ಪದ್ಧತಿಗೆ ಸಂಪರ್ಕಗೊಂಡಿರುವ ಗ್ರಾಹಕರು ಸ್ವೀಕರಿಸುವ ಸುರಕ್ಷಿತ, ಮಿತವ್ಯಯ, ಮತ್ತು ನಂಬಲರ್ಹ ವಿದ್ಯುತ್ತನ್ನು ದಕ್ಷ ರೀತಿಯಲ್ಲಿ ಒದಗಿಸುವ ಸಾಮರ್ಥ್ಯ ಹೊಂದಿದೆಯೆಂಬುದನ್ನು ಖಾತರಿ ಪಡಿಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳತಕ್ಕದ್ದು.

24.2 ಲೈಸೆನ್ಸುದಾರನು ಸೂಕ್ತ ಗುಣಮಟ್ಟದ ಸಾಕಷ್ಟು ವಿದ್ಯುತ್ ಲಭ್ಯತೆಗೆ ಒಳಪಟ್ಟು ವಿತರಣಾ ಪದ್ಧತಿಯ ಗ್ರಾಹಕರಿಗೆ ಸುರಕ್ಷಿತವಾದ, ನಂಬಲರ್ಹ ವಿದ್ಯುತ್ತನ್ನು ದಕ್ಷ ರೀತಿಯಲ್ಲಿ ಒದಗಿಸುವ ಸಾಮರ್ಥ್ಯ ಹೊಂದಿದೆಯೆಂಬುದನ್ನು ಖಾತರಿ ಪಡಿಸಿಕೊಂಡು ವಿತರಣಾ ಪದ್ಧತಿಯ ನಿರ್ವಹಣೆ ಮತ್ತು ಯೋಜನೆ ಮಾಡತಕ್ಕದ್ದು. ಅದರಲ್ಲಿಯೂ ಮುಖ್ಯವಾಗಿ ಲೈಸೆನ್ಸುದಾರನು,

ಎ) ಆಯೋಗವು ಅನುಮೋದಿಸಿದ ವಿತರಣಾ ಸಂಹಿತೆ ಸಹಿತ ವಿತರಣಾ ಪದ್ಧತಿಯ ಯೋಜನೆ ಮತ್ತು ಸುರಕ್ಷತಾ ಗುಣಮಟ್ಟಗಳ ಅನುಸಾರವಾಗಿ ವಿತರಣಾ ಪದ್ಧತಿಯನ್ನು ಯೋಜಿಸಿ ಅಭಿವೃದ್ಧಿಪಡಿಸತಕ್ಕದ್ದು; ಮತ್ತು

ಬಿ) ಆಯೋಗವು ಅನುಮೋದಿಸಿದ ವಿತರಣಾ ಸಂಹಿತೆ ಸಹಿತ ವಿತರಣಾ ಪದ್ಧತಿಯ ನಿರ್ವಹಣಾ ಗುಣಮಟ್ಟಗಳಿಗೆ ಅನುಸಾರವಾಗಿ ಲೈಸೆನ್ಸುದಾರನ ವಿತರಣಾ ಪದ್ಧತಿಯನ್ನು ನಿರ್ವಹಿಸತಕ್ಕದ್ದು.

24.3 ಅಧಿನಿಯಮದ 57ನೆಯ ಪ್ರಕರಣಕ್ಕೆ ಸಂಬಂಧಿಸಿದಂತೆ ಆಯೋಗದಿಂದ ನಿರ್ದಿಷ್ಟಪಡಿಸಲಾದ ಕಾರ್ಯಾಧಾರಿತ ಗುಣಮಟ್ಟಗಳನ್ನು ಉತ್ತಮವಾಗಿ ಸಾಧಿಸಬಹುದೆಂದು ಸಕಾರಣದಿಂದ ಪರಿಗಣಿಸುವ ದೃಷ್ಟಿಯಲ್ಲಿ ಲೈಸೆನ್ಸುದಾರನು ತನ್ನ ವಿತರಣಾ ವ್ಯವಹಾರವನ್ನು ನಡೆಸತಕ್ಕದ್ದು.

24.4 ಲೈಸೆನ್ಸುದಾರನ ನಿಯಂತ್ರಣದಿಂದ ನಿಯಂತ್ರಿಸಲು ಸಾಧ್ಯವಾಗದ ಸಂದರ್ಭಗಳು ಅಥವಾ ಪರಿಸ್ಥಿತಿ ಮೀರಿದ ಹೊರತು ಆಯೋಗದಿಂದ ಅನುಮೋದಿತವಾದ ಕಾರ್ಯಾಧಾರಿತ ಗುಣಮಟ್ಟಗಳನ್ನು ಲೈಸೆನ್ಸುದಾರನು ಪಾಲಿಸತಕ್ಕದ್ದು.

24.5 ಷರತ್ತು 24.4 ರಂತೆ ಎಲ್ಲಾ ಅಥವಾ ಯಾವುದೇ ಕಾರ್ಯಾಧಾರಿತ ಗುಣಮಟ್ಟಗಳನ್ನು ಲೈಸೆನ್ಸುದಾರನು ಪಾಲಿಸದಿದ್ದರೆ, ಲೈಸೆನ್ಸುದಾರನು, ಆಯೋಗವು ಕೆ.ವಿ.ನಿ.ಆ. (ಕಾರ್ಯಾಧಾರಿತ ಗುಣಮಟ್ಟಗಳು) ವಿನಿಯಮಗಳು, 2004ರನುಸಾರ ನಿರ್ದಿಷ್ಟಪಡಿಸಿದ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

24.6 ಲೈಸೆನ್ಸುದಾರನು ನ್ಯೂನತೆಯ ಸೇವೆಯ ಕಾರಣಕ್ಕಾಗಿ ಸಂದಾಯ ಮಾಡಿದ ಯಾವುದೇ ಪರಿಹಾರ/ದಂಡ/ಜುಲ್ಮಾನೆಯನ್ನು ಗ್ರಾಹಕರಿಂದ ವಸೂಲು ಮಾಡುವ ಇಆರ್‌ಸಿ/ವೆಚ್ಚದಲ್ಲಿ ಸೇರಿಸತಕ್ಕದ್ದಲ್ಲ.

24.7 ಆಯೋಗವು ನಿರ್ದಿಷ್ಟ ಪಡಿಸಿದ ಅವಧಿಯೊಳಗಾಗಿ ಲೈಸೆನ್ಸುದಾರನು, ಆಯೋಗವು ನಿರ್ದಿಷ್ಟಪಡಿಸಿದ ಕಾರ್ಯಾಧಾರಿತ ಗುಣಮಟ್ಟಗಳಿಗೆ ಪ್ರತಿಯಾಗಿ ಪ್ರಗತಿ ಸಾಧಿಸಿದ ಕಾರ್ಯಾಧಾರಿತ ಹಂತಗಳು ಮತ್ತು ಪರಿಹಾರ ನೀಡಿದ ಪ್ರಕರಣಗಳ ಸಂಖ್ಯೆ ಮತ್ತು ಪರಿಹಾರ ನೀಡಿದ ಸರಾಸರಿ ಮೊತ್ತದ ಮಾಹಿತಿಯನ್ನು ಆಯೋಗಕ್ಕೆ ಸಲ್ಲಿಸತಕ್ಕದು.

25. ಎಸ್‌ಟಿಯು, ಎಸ್‌ಎಲ್‌ಡಿಸಿ ಮತ್ತು ಇತರ ಲೈಸೆನ್ಸುದಾರರೊಂದಿಗೆ ಸಹಕಾರ:

25.1 ಲೈಸೆನ್ಸುದಾರನು, ಅಧಿನಿಯಮದಂತೆ ತನ್ನ ಅಧಿಕಾರಗಳನ್ನು ಚಲಾಯಿಸಲು ಮತ್ತು ತನ್ನ ಕರ್ತವ್ಯನಿರ್ವಹಣೆಗೆ ಸಕಾರಣವಾಗಿ ಅಗತ್ಯವೆನಿಸಬಹುದಾದಂತಹ ಮಾಹಿತಿಯನ್ನು ಎಸ್‌ಎಲ್‌ಡಿಸಿ, ಎಸ್‌ಟಿಯು ಮತ್ತು/ಅಥವಾ ಇತರ ಲೈಸೆನ್ಸುದಾರರಿಗೆ ಒದಗಿಸತಕ್ಕದು.

25.2 ಲೈಸೆನ್ಸುದಾರನು, ಅಧಿನಿಯಮದಡಿಯಲ್ಲಿ ಎಸ್‌ಎಲ್‌ಡಿಸಿ ಮತ್ತು ಎಸ್‌ಟಿಯುಗಳ ನಿರ್ದೇಶನಗಳನ್ನು ಪಾಲಿಸತಕ್ಕದು.

25.3 ಲೈಸೆನ್ಸುದಾರನು, ವಿದ್ಯುತ್ ಪದ್ಧತಿಯ ದಕ್ಷತೆಯ ಮತ್ತು ಸಮನ್ವಯಿತ ಆಚರಣೆಗಾಗಿ ಎಸ್‌ಎಲ್‌ಡಿಸಿಯೊಂದಿಗೆ ಮತ್ತು ಉತ್ಪಾದನಾ ಕಂಪನಿಗಳು ಇತರ ಲೈಸೆನ್ಸುದಾರರೊಂದಿಗೆ ಸಹಕರಿಸತಕ್ಕದು.

26. ಸರಬರಾಜು ಸಂಹಿತೆ.

26.1 ಲೈಸೆನ್ಸುದಾರರು,

ಎ) ಆಯೋಗ ನಿರ್ದಿಷ್ಟಪಡಿಸಿದ ಸರಬರಾಜು ಸಂಹಿತೆಯ ಪಾಲನೆ

ಬಿ) ಜಾರಿಯಲ್ಲಿರುವ ಸರಬರಾಜು ಸಂಹಿತೆ (ಮತ್ತು ಸರಬರಾಜು ಷರತ್ತುಗಳು)ಯನ್ನು, ಅದರ ಪ್ರತಿಯೊಂದು ಪ್ರಧಾನ ಪರಿಷ್ಕರಣೆ ಮತ್ತು ತಪಾಸಣೆ ಅಥವಾ ಅದರ ಇತ್ತೀಚಿನ ರೂಪದ ಪ್ರತಿ ಪಡೆಯುವ ಹಕ್ಕುಗಳನ್ನು ಗ್ರಾಹಕರ ಗಮನಕ್ಕೆ ತರುವುದು.

ಸಿ) ಕಾಲಕಾಲಕ್ಕೆ ಪರಿಷ್ಕರಣೆಯಾದ ಸಂಹಿತೆಯ (ಮತ್ತು ಸರಬರಾಜಿನ ಷರತ್ತುಗಳು) ಪ್ರತಿಯು ಸಾಮಾನ್ಯ ಕಾರ್ಯ ನಿರ್ವಹಣಾ ಅವಧಿಯಲ್ಲಿ ಸಾರ್ವಜನಿಕರಿಗೆ ಪರಿಶೀಲನೆಗಾಗಿ ಲಭ್ಯವಿರುವಂತೆ ಮಾಡುವುದು; ಮತ್ತು

ಡಿ) ಪ್ರತಿ ಹೊಸ ಗ್ರಾಹಕರಿಗೆ ಕಾಲಕಾಲಕ್ಕೆ ತಹಲ್‌ವರೆಗೆ ಪರಿಷ್ಕರಿಸಿದ ಸಂಹಿತೆಯ (ಮತ್ತು ಸರಬರಾಜು ಷರತ್ತುಗಳು) ಪ್ರತಿಯನ್ನು ಉಚಿತವಾಗಿ ಹಾಗೂ ಇತರೆ ಯಾವುದೇ ವ್ಯಕ್ತಿಯು ಬಯಸಿದರೆ ಅದನ್ನು ನಕಲು ಮಾಡುವ ವೆಚ್ಚ ಮೀರದ ದರದಲ್ಲಿ ಒದಗಿಸತಕ್ಕದು.

26.2 ಗ್ರಾಹಕ ಸನ್ನದು :

ಅಧಿನಿಯಮ ಮತ್ತು ಇತರ ಅನ್ವಯವಾಗುವ ನಿಯಮಗಳು ಹಾಗೂ ವಿನಿಯಮಗಳ ಅನುಸಾರ ಲೈಸೆನ್ಸುದಾರರ ಆಶ್ವಾಸಿತ ಸೇವಾ ಹಂತಗಳ ಮತ್ತು ಅವರ ಸಂಬಂಧದ ಇತರ ಅಂಶಗಳೂ ಸೇರಿದಂತೆ ವಿದ್ಯುಚ್ಛಕ್ತಿ ಸರಬರಾಜಿಗೆ ಸಂಬಂಧಿಸಿದಂತೆ ಲೈಸೆನ್ಸುದಾರನ ಹೊಣೆಗಾರಿಕೆಗಳು ಮತ್ತು ಗ್ರಾಹಕರ ಹಕ್ಕುಗಳು, ಅರ್ಹತೆಗಳು ಹಾಗು ಜವಾಬ್ದಾರಿಗಳನ್ನು ವಿವರಿಸುವ ಗ್ರಾಹಕರ ಸನ್ನದನ್ನು ಲೈಸೆನ್ಸುದಾರನು ರಚಿಸಿ, ಅದಕ್ಕೆ ಪ್ರಚಾರ ನೀಡಿ ಹಾಗೂ ಅದಕ್ಕೆ ಬದ್ಧವಾಗಿರತಕ್ಕದು. ಗ್ರಾಹಕರ ಸನ್ನದಿನಲ್ಲಿ ಗ್ರಾಹಕರ ದೂರು ನಿರ್ವಹಣಾ ವ್ಯವಹಾರಗಳು, ಗ್ರಾಹಕರ ಹಕ್ಕುಗಳ ಪಟ್ಟಿ ಮತ್ತು ಗ್ರಾಹಕರ ಮಾಹಿತಿ ಹಕ್ಕು ಮೊದಲಾದ ಅನುಮೋದಿತ ಇತರ ವಿಷಯಗಳನ್ನು ಒಳಗೊಂಡಿರತಕ್ಕದ್ದು.

26.3 ಗ್ರಾಹಕ ದೂರು ನಿರ್ವಹಣಾ ವ್ಯವಹರಣೆ.

ಆಯೋಗವು ನಿರ್ದಿಷ್ಟಪಡಿಸಿದ ದೂರು ನಿರ್ವಹಣಾ ವ್ಯವಹರಣೆಯನ್ನು ಲೈಸೆನ್ಸುದಾರನು ಪಾಲಿಸತಕ್ಕದು ಲೈಸೆನ್ಸುದಾರನು.

ಎ) ಕಾಲಕಾಲಕ್ಕೆ ಪರಿಷ್ಕೃತವಾದ ದೂರು ನಿರ್ವಹಣಾ ವ್ಯವಹರಣೆಯ ಪ್ರತಿಯು ಸಾಮಾನ್ಯ ಕಾರ್ಯ ನಿರ್ವಹಣೆಯ ಅವಧಿಯಲ್ಲಿ ಪ್ರತಿ ಸಂಗತವಾದ ಪ್ರದೇಶಗಳಲ್ಲಿ ಸಾರ್ವಜನಿಕರ ಪರಿಶೀಲನೆಗೆ ಲಭ್ಯವಿರುವಂತೆ, ಮಾಡತಕ್ಕದು;

ಮತ್ತು

ಬಿ) ಪ್ರತಿ ಹೊಸ ಗ್ರಾಹಕರಿಗೆ ಕಾಲಕಾಲಕ್ಕೆ ಪರಿಷ್ಕರಣೆಯಾದ ವ್ಯವಹರಣೆಯ ಪ್ರತಿಯನ್ನು ಉಚಿತವಾಗಿ ಮತ್ತು ಇತರ ಯಾವುದೇ ಕೋರುವ ವ್ಯಕ್ತಿಗೆ ಅದನ್ನು ನಕಲು ಮಾಡುವುದಕ್ಕೆ ತಗುಲುವ ವೆಚ್ಚ ಮೀರದ ಬೆಲೆಗೆ ಒದಗಿಸತಕ್ಕದು.

26.4 ಗ್ರಾಹಕರ ಮಾಹಿತಿ ಹಕ್ಕು :

ಲೈಸೆನ್ಸುದಾರನು, ಗ್ರಾಹಕನ ಕೋರಿಕೆಯ ಮೇರೆಗೆ, ಲೈಸೆನ್ಸುದಾರನಿಗೆ ಮಾಹಿತಿಯು ಸೂಕ್ತವಾಗಿ ಲಭ್ಯವಾಗುವವರೆಗೆ ಒದಗಿಸುವುದು;

ಎ) ಗ್ರಾಹಕರಿಗೆ ಲಭ್ಯವಾಗಬಹುದಾದ ಶುಲ್ಕಗಳು ಅಥವಾ ಪರ್ಯಾಯ ದರ ಯೋಜನೆಗಳ ಮೇಲಿನ ಮಾಹಿತಿಯೂ ಸೇರಿದಂತೆ ಲೈಸೆನ್ಸುದಾರನಿಂದ ಒದಗಿಸಲಾದ ಎಲ್ಲಾ ಸೇವೆಗಳ ಮಾಹಿತಿ.

ಬಿ) ಲೈಸೆನ್ಸುದಾರರಿಂದ ಗ್ರಾಹಕನ ಪ್ರದೇಶಕ್ಕೆ ಒದಗಿಸಲಾದ ವಿದ್ಯುತ್ ಸೇವೆಗಳಿಗಾಗಿ ಮಾಪನ ವಾಚನದ ಮಾಹಿತಿ; ಮತ್ತು

ಸಿ) ಲೈಸೆನ್ಸುದಾರನಲ್ಲಿರುವ ಗ್ರಾಹಕನ ಖಾತೆಯ ಸ್ಥಿತಿಯ ಮೇಲಿನ ಮಾಹಿತಿ;

ಕೋರಿದ ಮಾಹಿತಿಯು ಸಾಮಾನ್ಯ ಸ್ವರೂಪದ್ದಾಗಿರದ ಹೊರತು, ಈ ಪ್ರಕರಣದಂತೆ ಮಾಹಿತಿ ಒದಗಿಸುವುದಕ್ಕಾಗಿ ಲೈಸೆನ್ಸುದಾರನು ಸೂಕ್ತವಾದ ಮೊತ್ತವನ್ನು ವಿಧಿಸಬಹುದಾಗಿದೆ.

27. ನಿರೀಕ್ಷಿತ ಆದಾಯದ ಲೆಕ್ಕಾಚಾರ ಮತ್ತು ದರಗಳು

27.1 ಲೈಸೆನ್ಸುದಾರನು ಶುಲ್ಕಗಳಿಂದ ನಿರೀಕ್ಷಿತ ಆದಾಯದ ಪಟ್ಟಿ ಸಲ್ಲಿಸುವಾಗ ಮತ್ತು ತನ್ನ ಎಲ್ಲಾ ದರಗಳನ್ನು ಅಥವಾ ಯಾವುದೇ ಅದರ ತಿದ್ದುಪಡಿ ಅಥವಾ ದರಗಳನ್ನು ಪ್ರಸ್ತಾಪಿಸುವಾಗ ಆಯೋಗವು ಕಾಲಕಾಲಕ್ಕೆ ನೀಡಬಹುದಾದ ದರ ವಿನಿಯಮಗಳು ಮತ್ತು ಇತರ ಆದೇಶಗಳೂ ಸೇರಿದಂತೆ ಪದ್ಧತಿ ಕಾರ್ಯವಿಧಾನ ವ್ಯವಹರಣೆಗಳು ಮತ್ತು ಇತರ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

27.2 ಯಾವುದೇ ಆರ್ಥಿಕ ವರ್ಷದಲ್ಲಿ ತನ್ನ ದರಗಳಿಂದ ವಸೂಲು ಮಾಡಲು ಲೈಸೆನ್ಸುದಾರನಿಗೆ ಅನುಮತಿಸಿರುವ ಮೊತ್ತವನ್ನು ಆಯೋಗವು, ಅಧಿನಿಯಮದ 62ನೆಯ ಪ್ರಕರಣದನುಸಾರ ನಿಗದಿಪಡಿಸುತ್ತದೆ.

28. ಲೈಸೆನ್ಸುದಾರನ ಅಧಿಕಾರಗಳು.

ಅಧಿನಿಯಮದ ಉಪಬಂಧಗಳು, ವಿನಿಯಮಗಳು ಮತ್ತು/ಅಥವಾ ಲೈಸೆನ್ಸಿನ ಈ ಷರತ್ತುಗಳಂತೆ ಲೈಸೆನ್ಸುದಾರನಿಗೆ ಮಂಜೂರಾದ ಯಾವುದೇ ಅಧಿಕಾರವನ್ನು ಚಲಾಯಿಸುವಲ್ಲಿ ವಿಫಲವಾದ ಸ್ಥಿತಿಯಲ್ಲಿ ಅಪೇಕ್ಷಿತವಾಗಿದ್ದರೆ ಲೈಸೆನ್ಸಿನ ಷರತ್ತುಗಳ ಉಲ್ಲಂಘನೆಯೆಂಬ ಅರ್ಥ ಕಲ್ಪಿಸತಕ್ಕದ್ದು.

## ಭಾಗ – IV

## ಇತರ ಷರತ್ತುಗಳು

29. ಸ್ಪರ್ಧೆಯ ಆರಂಭ

29.1 ಆಯೋಗವು, ಅಧಿನಿಯಮದ 14ನೆಯ ಪ್ರಕರಣದ ಉಪಬಂಧಕ್ಕೊಳಪಟ್ಟು ಲೈಸೆನ್ಸುದಾರನು ತನ್ನ ಸರಬರಾಜು ಪ್ರದೇಶದಲ್ಲಿ ವಿದ್ಯುಚ್ಛಕ್ತಿ ವಿತರಣೆ ಮಾಡುವುದಕ್ಕಾಗಿ ಯಾವುದೇ ವ್ಯಕ್ತಿಗೆ(ಗಳಿಗೆ) ಲೈಸೆನ್ಸು ಮಂಜೂರು ಮಾಡಬಹುದಾಗಿದೆ.

29.2 ವಿದ್ಯುಚ್ಛಕ್ತಿ ಉದ್ಯಮದಲ್ಲಿ ಸ್ಪರ್ಧೆಗೆ ಪ್ರತಿರೋಧದ ಪರಿಣಾಮಗಳ ಕಾರಣ ಅಥವಾ ಕಾರಣಗಳಾಗುವ ಸಂಭವವಾಗುವ ಯಾವುದೇ ಒಪ್ಪಂದಕ್ಕೆ ಅಥವಾ ತನ್ನ ಪ್ರಾಬಲ್ಯದ ಸ್ಥಿತಿಯ ನಿಂದನೆ ಅಥವಾ ಸಂಯುಕ್ತ ಸ್ಥಿತಿಗೆ ಲೈಸೆನ್ಸುದಾರನು ಬರತಕ್ಕದ್ದಲ್ಲ.

ಆಯೋಗದ ಆದೇಶದ ಮೇರೆಗೆ

ಕಾರ್ಯದರ್ಶಿ/ಕ.ವಿ.ನಿ.ಆ.

KERC (Condition of Licence for ESCOMS)
Reg, 2004